ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ
ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – ೫೬೦ ೦೦೧

ಸಂಖ್ಯೆ: ಸಶಿಅ/ಒಒಎಸ್‌ಸಿ/ಸುತ್ತೋಲೆ/2017–18 ದಿನಾಂಕ: 11.04.2017

# ಸುತ್ತೋಲೆ

ವಿಷಯ: 2017–18ನೇ ಸಾಲಿಗೆ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ತರಲು ಕಾರ್ಯತಂತ್ರಗಳನ್ನು/ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: 1. ದಿನಾಂಕ:15.02.2017 ರಂದು ನಡೆದ ಯೋಜನಾ ಅನುಮೋದನ ಮಂಡಳಿಯ ಶಿಫಾರಸ್ಸಿನ್ವಯ.

2. ಈ ಕಚೇರಿ ಸುತ್ತೋಲೆ ಸಂಖ್ಯೆ: ಸಶಿಅ/ಒಒಎಸ್‌ಸಿ/ಸುತ್ತೋಲೆ/1/2017–18 ದಿನಾಂಕ:06.03.2017. (ಚಿಣ್ಣರ ಅಂಗಳ ಕಾರ್ಯಕ್ರಮ)

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿರುವ ಶಾಲೆಯಿಂದ ಹೊರಗುಳಿದ ಎಲ್ಲಾ ಮಕ್ಕಳನ್ನು ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ತಂದು ಅವರು ನಿರಂತರವಾಗಿ ಶಿಕ್ಷಣ ಮುಂದುವರೆಸಲು ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಹಾಗೂ ನಿರಂತರ ಮೇಲ್ವಿಚಾರಣೆ ವ್ಯವಸ್ಥೆ ರೂಪಿಸಿ ಯಾವುದೇ ಮಗುವೂ ಶಾಲೆಯಿಂದ ಹೊರಗುಳಿಯದಂತೆ ಕ್ರಮವಹಿಸುವುದು ಇಲಾಖೆಯ ಜವಾಬ್ದಾರಿಯಾಗಿರುತ್ತದೆ. ಪ್ರತಿ ವರ್ಷದಂತೆ 2016–17ನೇ ಸಾಲಿನಲ್ಲಿಯೂ ಡಿಸೆಂಬರ್–2016ರ ದಿನಾಂಕ:05.12.2016 ರಿಂದ 12.12.2016 ರವರೆಗೆ ಶಾಲೆಯಿಂದ ಹೊರಗುಳಿದ ಮಕ್ಕಳ ಪರಿಷ್ಕರಣೆ ಸಮೀಕ್ಷೆಯನ್ನು ಮಾಡಿ, ದೊರೆತ ಒಟ್ಟು **8318** ಮಕ್ಕಳು ಹಾಗೂ ಹಿಂದಿನ ಸಾಲಿನಿಂದ ಮುಂದುವರೆದ **8687** ಮಕ್ಕಳು ಒಟ್ಟು **17005** ಮಕ್ಕಳನ್ನು ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ತರಲು ಕ್ರಿಯಾ ಯೋಜನೆ ತಯಾರಿಸಲಾಗಿತ್ತು. ಉಲ್ಲೇಖ(2)ರ ಸುತ್ತೋಲೆಯಂತೆ ಈಗಾಗಲೇ 3 ತಿಂಗಳ ವಸತಿರಹಿತ/ವಸತಿಸಹಿತ ವಿಶೇಷ ತರಬೇತಿ (ಚಿಣ್ಣರ ಅಂಗಳ) ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಚಿಣ್ಣರ ಅಂಗಳ ಪಡೆಯುತ್ತಿರುವ ಮಕ್ಕಳ ವಿವರವಾದ ಮಾಹಿತಿಯುಳ್ಳ ಪಟ್ಟಿಯನ್ನು ನಿಗಧಿತ ನಮೂನೆಯಲ್ಲಿ ತುರ್ತಾಗಿ ಒದಗಿಸಲು ತಿಳಿಸಲಾಗಿದೆ.

**2017–18 ನೇ ಸಾಲಿನಲ್ಲಿ ಅಳವಡಿಸಿರುವ ಒಒಎಸ್‌ಸಿ ಕಾರ್ಯತಂತ್ರಗಳು ಹಾಗೂ ಪಿ.ಎ.ಬಿ. ಅನುಮೋದಿತ ಅನುದಾನದ ಘಟಕ ವೆಚ್ಚ.**

| ಕಾರ್ಯತಂತ್ರಗಳ ಹೆಸರು | ಪ್ರತಿ ಮಗುವಿಗೆ ಪಿ.ಎ.ಬಿ ಸಭೆಯಲ್ಲಿ ಅನುಮೋದಿತ ಘಟಕ ವೆಚ್ಚ |
|---|---|
| 1. 12 ತಿಂಗಳ ವಸತಿಯುತ ವಿಶೇಷ ತರಬೇತಿ (12 RST) | ರೂ.20000/– |
| 2. ಚಿಣ್ಣರ ತಂಗುಧಾಮ ವಿಶೇಷ ತರಬೇತಿ (12 RST) UDC | ರೂ.20000/– |
| 3. ಔಪಚಾರಿಕ ಶಿಕ್ಷಣ ನೀಡಲು ಮುಂದೆ ಬಂದ ಮದರಸಗಳಿಗೆ (9 NRST) | ರೂ.4500/– |
| 4. 6 ತಿಂಗಳ ವಸತಿರಹಿತ ವಿಶೇಷ ತರಬೇತಿ (6 NRST) | ರೂ.3000/– |
| 5. ವಲಸಿತ ಕುಟುಂಬಗಳ ಮಕ್ಕಳಿಗಾಗಿ ವಿಶೇಷ ತರಬೇತಿ (ಟೆಂಟ್ ಶಾಲೆ)(6 NRST) | ರೂ.3000/– |
| 6. ಶಾಲಾಧಾರಿತ ವಿಶೇಷ ತರಬೇತಿ (ಸ್ವಯಂ ಸೇವಕಸಹಿತ) (6 ತಿಂಗಳ ಅವಧಿಗೆ) | ರೂ.3000/– |
| 7. 6 ತಿಂಗಳ ಋತುಮಾನ ವಸತಿಯುತ ಕೇಂದ್ರ (SRST) | ರೂ.10000/– |
| 8. 3 ತಿಂಗಳ ವಸತಿಸಹಿತ ವಿಶೇಷ ತರಬೇತಿ (3 RST) | ರೂ.5000/– |
| 9. 3 ತಿಂಗಳ ವಸತಿರಹಿತ ವಿಶೇಷ ತರಬೇತಿ (3 NRST) | ರೂ.1500/– |

* **ವಿ.ಸೂ:** ಕ್ರ.ಸಂ.1 ರಿಂದ 6ರ

ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಮೂಲಕ ಮುಖ್ಯವಾಹಿನಿಗೆ ಬಂದ ಮಕ್ಕಳ ವಿವರವಾದ ಮಾಹಿತಿಯನ್ನು ಕೆಳಕಂಡ ನಮೂನೆಗಳಲ್ಲಿ ಸಲ್ಲಿಸಲು ತಿಳಿಸಿದೆ. ಉಳಿದಂತೆ ಕ್ರಮ.ಸಂಖ್ಯೆ:7 ರ **ಆರು** ತಿಂಗಳ ಋತುಮಾನ ವಸತಿಯುತ ಕೇಂದ್ರ (SRST) ಕಾರ್ಯಕ್ರಮವನ್ನು ಪ್ರಾರಂಭಿಸಿ, ವಿವಿಧ ಕೇಂದ್ರಗಳಲ್ಲಿ ಗುರುತಿಸಲಾದ ಮಕ್ಕಳ ವಿವರಗಳುಳ್ಳ ಪಟ್ಟಿಯನ್ನು ರಾಜ್ಯ ಕಛೇರಿಗೆ ಕಳುಹಿಸಲು ತಿಳಿಸಲಾಗಿದೆ. ವಿಶೇಷ ತರಬೇತಿ ಕಾರ್ಯತಂತ್ರಗಳ ಅನುಷ್ಠಾನಕ್ಕಾಗಿ

ಕೈಪಿಡಿಗಳು ಈಗಾಗಲೇ ಲಭ್ಯವಿದ್ದು, ಹೊಸದಾಗಿ ಮುದ್ರಿಸುವ ಅಗತ್ಯವಿಲ್ಲದಿರುವುದರಿಂದ ಆಯಾಯ ಕಾರ್ಯತಂತ್ರಗಳ ಘಟಕ ವೆಚ್ಚದಲ್ಲಿ ರೂ.200/- ರನ್ನು ಬಳಸಿಕೊಳ್ಳಬಾರದಾಗಿ ತಿಳಿಸಲಾಗಿದೆ.

**1. 12 ತಿಂಗಳ ವಸತಿಯುತ ವಿಶೇಷ ತರಬೇತಿ (12 RST) :-**

ಹನ್ನೆರಡು ತಿಂಗಳ ವಸತಿಯುತ ವಿಶೇಷ ತರಬೇತಿಯನ್ನು ಶಾಲೆಯಿಂದ ಹೊರಗುಳಿದ ಹಿರಿಯ ವಯಸ್ಸಿನ ಮತ್ತು ಮುಖ್ಯವಾಹಿನಿಗೆ ಸೇರಲು ಹೆಚ್ಚು ಸಮಯದ ಅಗತ್ಯವಿರುವ ಮಕ್ಕಳು ಈ ಕಾರ್ಯತಂತ್ರದ ಫಲಾನುಭವಿಗಳಾಗಿರುತ್ತಾರೆ. ಈ ಕಾರ್ಯಕ್ರಮದ ಕಾಲಾವಧಿಯು 12 ತಿಂಗಳು ಇದ್ದರೂ ಸಹ ಮಗು ತನ್ನ ವಯಸ್ಸಿಗೆ ಅನುಗುಣವಾಗಿ ಕಲಿಕೆಯನ್ನುಂಟು ಮಾಡಿಕೊಂಡು ಔಪಚಾರಿಕ ತರಗತಿಗಳಿಗೆ ಸೇರಲು (Regular classes) ಶಕ್ತವಾದಲ್ಲಿ ನಿಗಧಿ ಪಡಿಸಿದ ಅವಧಿಗಿಂತ ಮೊದಲೇ ಅಂತಹ ಮಗುವನ್ನು ಶಾಲೆಗೆ ದಾಖಲಿಸಬಹುದು. ಇಂತಹ ಕೇಂದ್ರಗಳಿಗೆ ಸ್ವಯಂಸೇವಕರ ಜೊತೆಗೆ ನುರಿತ ಶಿಕ್ಷಕರನ್ನು ತಪ್ಪದೇ ನಿಯೋಜಿಸುವುದು. ಶಿಕ್ಷಕರನ್ನು ಎನ್‌ಜಿಓಗಳು ನಡೆಸುತ್ತಿರುವ ಕೇಂದ್ರಗಳಿಗೂ ಕೂಡ ನಿಯೋಜಿಸುವುದು. ಹಾಗೂ 01 ಕೇಂದ್ರದಲ್ಲಿ 50 ಮಕ್ಕಳಂತೆ ವಿಶೇಷ ತರಬೇತಿಯನ್ನು ಆಯೋಜಿಸುವುದು.

**ವಿಶೇಷ ಸೂಚನೆ:**

**ಸದರಿ ಕೇಂದ್ರದಲ್ಲಿ ಕೆಳಗಿನಂತೆ ಕ್ರಮ ವಹಿಸುವುದು.**

- **ಮಕ್ಕಳ ಸಂಖ್ಯೆಗೆ ಅನುಗುಣವಾಗಿ ನಿಯಮಾನುಸಾರ ಹಣ ಖರ್ಚು ಮಾಡತಕ್ಕದ್ದು.**
- **ಒಂದು ಕೇಂದ್ರದಲ್ಲಿ 50 ಮಕ್ಕಳಿರುವಂತೆ ವ್ಯವಸ್ಥೆ ಮಾಡುವುದು.**
- **30 ಕ್ಕಿಂತ ಹೆಚ್ಚು ಮಕ್ಕಳಿದ್ದಲ್ಲಿ ಇಬ್ಬರು ಸ್ವಯಂಸೇವಕರನ್ನು ನೇಮಕ ಮಾಡಿಕೊಳ್ಳುವುದು.**
- **ಪೋಷಕರ ಸಭೆಯನ್ನು ಪ್ರತಿ 2 ತಿಂಗಳಿಗೆ ಒಂದರಂತೆ ನಡೆಸಿ. ಆ ಸಭೆಯಲ್ಲಿ ಶಿಕ್ಷಣದ ಮಹತ್ವದ ಬಗ್ಗೆ ಹಾಗೂ ಮಕ್ಕಳ ಕಲಿಕೆ ಬಗ್ಗೆ ಅವರ ಉತ್ತರ ಪತ್ರಿಕೆಗಳೊಂದಿಗೆ ಚರ್ಚಿಸುವುದು.**
- **ಪ್ರತಿ 2 ತಿಂಗಳಿಗೊಮ್ಮೆ 10 ರಿಂದ 13 ವಯೋಮಾನದ ಮಕ್ಕಳಿಗೆ ಯೋಗ, ಧ್ಯಾನ, ಪ್ರಾಣಾಯಾಮವನ್ನೊಳಗೊಂಡಂತೆ ಜೀವನ ಕೌಶಲ್ಯದ ತರಬೇತಿಯನ್ನು ಪರಿಣಾಮಕಾರಿಯಾಗಿ ನೀಡುವುದು.**
- **ಸ್ವಯಂ ಸೇವಾ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸ್ವಯಂ ಸೇವಕರಿಗೆ ಸಂಭಾವನೆಯನ್ನು ಬ್ಯಾಂಕ್ ಖಾತೆ ತೆರೆದು ಪ್ರತಿ ತಿಂಗಳು 05ನೇ ತಾರೀಖಿನೊಳಗೆ ಚೆಕ್ ಮೂಲಕ ಪಾವತಿಸುವುದು.**

**(ಘಟಕ ವೆಚ್ಚದ ವಿವರವನ್ನು ಅನುಬಂಧ 2 ರಲ್ಲಿ ಮತ್ತು ಆಹಾರದ ಸೂಚಿತ ಪಟ್ಟಿಯನ್ನು ನೀಡಿದೆ)**

**ಅನುಬಂಧ – 2**

12 ತಿಂಗಳ ವಸತಿಯುತ ವಿಶೇಷ ತರಬೇತಿ (12 RST)

**ಘಟಕ ವೆಚ್ಚದ ಮರು ಹಂಚಿಕೆ. (ಪ್ರತಿ ಮಗುವಿಗೆ 12 ತಿಂಗಳಿಗೆ )**

| | | | |
|---|---|---|---|
| ಊಟಕ್ಕೆ / ಉಪಹಾರ | – | 10800 | |
| ಸ್ವಯಂ ಸೇವಕರ ಗೌರವ ಸಂಭಾವನೆ | – | 3360 | 1 ಕೇಂದ್ರಕ್ಕೆ ಒಬ್ಬ ಸ್ವಯಂ ಸೇವಕರಿಗೆ ಗೌರವ ಸಂಭಾವನೆ ಗರಿಷ್ಠ 4000 ಒಂದು ತಿಂಗಳಿಗೆ |
| ಸಹಾಯಕರ ಗೌರವ ಸಂಭಾವನೆ | – | 1200 | 1 ಕೇಂದ್ರಕ್ಕೆ ಸಹಾಯಕರ ಗೌರವ ಸಂಭಾವನೆ ಗರಿಷ್ಠ ರೂ.2500/- 1 ತಿಂಗಳಿಗೆ |
| ಬೆಡ್ಡಿಂಗ್ | – | 500 | |
| ದೈನಂದಿನ ವಸ್ತುಗಳು | – | 600 | |
| ಕೇಂದ್ರದ ಸಾದಿಲ್ವಾರು | – | 100 | |
| ಟಿ.ಎಲ್.ಎಂ | – | 200 | |
| ವೈದ್ಯಕೀಯ | – | 230 | |
| ತುರ್ತು ನಿಧಿ | – | 50 | |
| ಮಗುವಿಗೆ ಲೇಖನ ಸಾಮಗ್ರಿ | – | 350 | |
| ಗಟ್ಟಿಯಾದ ಸೂಟ್‌ಕೇಸ್/ಟ್ರಂಕ್ | – | 400 | ಹಿಂದಿನ ವರ್ಷ ಈ ಸೌಲಭ್ಯ ಪಡೆದ ವಿದ್ಯಾರ್ಥಿಗಳಿಗೆ ಈ ಬಾರಿ ಈ ಸೌಲಭ್ಯ ನೀಡಬಾರದು |
| ಶೂ, ಸಾಕ್ಸ್ (1 ಜೊತೆ) | – | 300 | |
| ದಾಖಲೀಕರಣ(ಬ್ಯಾಡ್ಜ್, ಐ.ಡಿ ಕಾರ್ಡ್, ಐ.ಇ.ಪಿ, ವರದಿ) | – | 300 | |
| ಶೈಕ್ಷಣಿಕ ಪ್ರವಾಸ | – | 500 | |
| ಪ್ರತಿಭಾ ದಿನಾಚರಣೆ | – | 200 | |
| ಒಂದು ಜೊತೆ ಬಟ್ಟೆ, ಟವೆಲ್ (ಇಲಾಖೆ ನೀಡುವ ಸಮವಸ್ತ್ರ ಜೊತೆಗೆ) | – | 400 | |
| ಪೋಷಕರ ಸಭೆ | - | 60 | |

| | | | |
|---|---|---|---|
| ಜೀವನ ಕೌಶಲ್ಯ ತರಬೇತಿ, ಕೇಂದ್ರಗಳಲ್ಲಿ ತಿಂಗಳಿಗೆ ಒಂದರಂತೆ | – | 250 | |
| ಚಿಣ್ಣರ ಅಂಗಳ ಕೈಪಿಡಿ ಮುದ್ರಣಕ್ಕಾಗಿ ರಾಜ್ಯ ಕಛೇರಿಯ ಬಳಕೆಗಾಗಿ | – | 200 | |
| **ಒಟ್ಟು ರೂ.** | | **20000.00** | |

## 2. ಚಿಣ್ಣರ ತಂಗುಧಾಮ ವಿಶೇಷ ತರಬೇತಿ (ಯು.ಡಿ.ಸಿ, 12 ತಿಂಗಳು)

ಚಿಣ್ಣರ ತಂಗುಧಾಮವು ವಿಶೇಷ ತರಬೇತಿಯು ನಗರ ಪ್ರದೇಶದಲ್ಲಿ ಹೊಸದಾಗಿ ಗುರುತಿಸಿರುವ ಶಿಕ್ಷಣ ವಂಚಿತ ಮಕ್ಕಳಿಗೆ ಚಿಣ್ಣರ ತಂಗುಧಾಮ ಕಾರ್ಯತಂತ್ರವನ್ನು/ಚಟುವಟಿಕೆಯನ್ನು ಅನುಷ್ಠಾನಗೊಳಿಸಬೇಕಾಗಿದೆ.ಈ ಕೇಂದ್ರದಲ್ಲಿ ಅತ್ಯಂತ ಶೋಚನೀಯವಾಗಿ ಶಿಕ್ಷಣದಿಂದ ವಂಚಿತರಾದ ಮಕ್ಕಳಿಗಾಗಿ ಈ ಕೇಂದ್ರವನ್ನು ತೆರೆಯಬೇಕಾಗಿರುತ್ತದೆ. ಇದರಲ್ಲಿ ಅನಾರೋಗ್ಯಕರ ಚಟುವಟಿಕೆಗಳಾದ ಕುಡಿತ, ಧೂಮಪಾನ, ಮಾದಕವ್ಯಸನಕ್ಕೆ ಒಳಪಟ್ಟ ಮಕ್ಕಳು, ಸಾಗಾಣಿಕೆಗೆ ಒಳಪಟ್ಟ ಮಕ್ಕಳು, ಭಿಕ್ಷಾಟನೆಗೆ ಒಳಪಟ್ಟ ಮಕ್ಕಳು, ಬಲವಂತವಾಗಿ ಬಾಲಕಾರ್ಮಿಕ ಪದ್ಧತಿಗೆ ಒಳಪಟ್ಟ ಮಕ್ಕಳು, ದುಷ್ಟಟಗಳಿಗೆ ಒಳಪಟ್ಟು ಶಿಕ್ಷಣದಿಂದ ವಂಚಿತರಾದ ಮಕ್ಕಳು, ಮನೆಗಳಿಂದ ಓಡಿಬಂತಹ ಮಕ್ಕಳು, ಕಾನೂನಿನೊಡನೆ ಸಂಘರ್ಷಗಳಿಗೆ ಒಳಪಟ್ಟ ಮಕ್ಕಳು (non serious offence), ಅನಾಥ ಮಕ್ಕಳು ಇದರಲ್ಲಿ ಸೇರಿರುತ್ತಾರೆ. ಸದರಿ ಮಕ್ಕಳಿಗೆ ಈ ಕಾರ್ಯತಂತ್ರದ ಮೂಲಕ ತರಬೇತಿಯನ್ನು ನೀಡಿ ಶಾಲಾ ಶಿಕ್ಷಣದ ವ್ಯಾಪ್ತಿಗೆ ತರುವುದು ಕಡ್ಡಾಯವಾಗಿದೆ.

**(ಘಟಕ ವೆಚ್ಚದ ವಿವರವನ್ನು ಅನುಬಂಧ – 3ರಲ್ಲಿ ಮತ್ತು ಆಹಾರ ಸೂಚಿತ ಪಟ್ಟಿಯನ್ನು ಕೆಳಕಂಡಂತೆ ನೀಡಿದೆ)**

### ಅನುಬಂಧ – 3

**12 ಆರ್ ಎಸ್ ಟಿ – ಘಟಕ ವೆಚ್ಚದ ಹಂಚಿಕೆ (ಪ್ರತಿ ಮಗುವಿಗೆ 12 ತಿಂಗಳಿಗೆ) ಮತ್ತು ನಗರ ಪ್ರದೇಶದ ಶಿಕ್ಷಣ ವಂಚಿತ) ಮಕ್ಕಳಿಗಾಗಿ ಚಿಣ್ಣರ ತಂಗುಧಾಮ ಕೇಂದ್ರ:** (Urban Deprived Children)

| | | | |
|---|---|---|---|
| ಊಟಕ್ಕೆ / ಉಪಹಾರ | – | 10800 | |
| ಸ್ವಯಂ ಸೇವಕರ ಗೌರವ ಸಂಭಾವನೆ | – | 3360 | 1 ಕೇಂದ್ರಕ್ಕೆ ಒಬ್ಬ ಸ್ವಯಂ ಸೇವಕರಿಗೆ ಗೌರವ ಸಂಭಾವನೆ ಗರಿಷ್ಠ 4000 ಒಂದು ತಿಂಗಳಿಗೆ |
| ಸಹಾಯಕರ ಗೌರವ ಸಂಭಾವನೆ | – | 1200 | 1 ಕೇಂದ್ರಕ್ಕೆ ಸಹಾಯಕರ ಗೌರವ ಸಂಭಾವನೆ ಗರಿಷ್ಠ ರೂ.2500/– 1 ತಿಂಗಳಿಗೆ |
| ಬೆಡ್ಡಿಂಗ್ | – | 500 | |
| ದೈನಂದಿನ ವಸ್ತುಗಳು | – | 600 | |
| ಕೇಂದ್ರದ ಸಾದಿಲ್ವಾರು | – | 100 | |
| ಟಿ.ಎಲ್.ಎಂ | | 200 | |
| ವೈದ್ಯಕೀಯ | – | 230 | |
| ತುರ್ತು ನಿಧಿ | – | 50 | |
| ಮಗುವಿಗೆ ಲೇಖನ ಸಾಮಗ್ರಿ | – | 350 | |
| ಗಟ್ಟಿಯಾದ ಸೂಟ್‌ಕೇಸ್/ಟ್ರಂಕ್ | – | 400 | ಹಿಂದಿನ ವರ್ಷ ಈ ಸೌಲಭ್ಯ ಪಡೆದ ವಿದ್ಯಾರ್ಥಿಗಳಿಗೆ ಈ ಬಾರಿ ಈ ಸೌಲಭ್ಯ ನೀಡಬಾರದು. |
| ಶೂ, ಸಾಕ್ಸ್ (1 ಜೊತೆ) | – | 300 | |
| ದಾಖಲೀಕರಣ (ಬ್ಯಾಡ್ಜ್, ಐ.ಡಿ ಕಾರ್ಡ್, ಐ.ಇ.ಪಿ, ವರದಿ) | – | 300 | |
| ಶೈಕ್ಷಣಿಕ ಪ್ರವಾಸ | – | 500 | |
| ಪ್ರತಿಭಾ ದಿನಾಚರಣೆ | – | 200 | |
| ಒಂದು ಜೊತೆ ಬಟ್ಟೆ, ಟವೆಲ್(ಇಲಾಖಾ ನೀಡುವ ಸಮವಸ್ತ್ರ ಜೊತೆಗೆ) | – | 400 | |
| ಪೋಷಕರ ಸಭೆ | – | 60 | |
| ಜೀವನ ಕೌಶಲ್ಯ ತರಬೇತಿ (2 ತಿಂಗಳಿಗೆ 1 ರಂತೆ) | – | 250 | |
| ಕೈಪಿಡಿ ಮುದ್ರಣಕ್ಕಾಗಿ ರಾಜ್ಯ ಕಛೇರಿಯ ಬಳಕೆಗಾಗಿ | – | 200 | |
| **ಒಟ್ಟು ರೂ.** | | **20000.00** | |

**ವಸತಿ ಸಹಿತ (ಆರ್.ಎಸ್ ಟಿ ಮತ್ತು ಯು.ಡಿ.ಸಿ) ಕೇಂದ್ರಗಳ ಸೂಚನಾ ಫಲಕದಲ್ಲಿ ಪ್ರಕಟಿಸಬೇಕಾದ ಆಹಾರದ ಸೂಚಿತ ಪಟ್ಟಿ**

| ಕ್ರ.ಸಂ. | ವಾರ | ಬೆಳಿಗ್ಗಿನ ತಿಂಡಿ | ಮಧ್ಯಾಹ್ನದ ಊಟ | ಸಾಯಂಕಾಲದ ಲಘು ಉಪಹಾರ | ರಾತ್ರಿ ಊಟ |
|---|---|---|---|---|---|
| 1 | ಭಾನುವಾರ | ಇಡ್ಲಿ, ಸಾಂಬಾರು, ಚಟ್ನಿ ,ಹಾಲು | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು(ಮಾಲ್ಟ್/ ಬೋರ್ನ್ವಿಟ) ಮತ್ತು ಮೊಳಕೆ ಒಡೆದ ಕಾಳು (ಕಡ್ಲೆ ಬೀಜ) | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ ಸಿಹಿ. |
| 2 | ಸೋಮವಾರ | ಚಿತ್ರನ್ನ ಹಾಲು | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು(ಮಾಲ್ಟ್/ ಬೋರ್ನ್ವಿಟ) ಮತ್ತು ಮೊಳಕೆ ಒಡೆದ ಕಾಳು (ಹಸಿರು ಕಾಳು) | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ ಸಿಹಿ. |
| 3 | ಮಂಗಳವಾರ | ಉಪ್ಪಿಟ್ಟು, ಹಾಲು | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು(ಮಾಲ್ಟ್/ ಬೋರ್ನ್ವಿಟ) ಮತ್ತು ಅವಲಕ್ಕಿ ಚೂಡಾ | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ, ಸಿಹಿ. |
| 4 | ಬುಧವಾರ | ಅವಲಕ್ಕಿ, ಹಾಲು | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು(ಮಾಲ್ಟ್/ ಬೋರ್ನ್ವಿಟ) ಮತ್ತು ಬಿಸ್ಕೇಟ್ | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ, ಸಿಹಿ. |
| 5 | ಗುರುವಾರ | ಪುಳಿಯೊಗರೆ, ಹಾಲು | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು(ಮಾಲ್ಟ್/ ಬೋರ್ನ್ವಿಟ) ಮತ್ತು ಮೊಳಕೆ ಒಡೆದ ಕಾಳು (ಕಡ್ಲೆ ಬೀಜ) | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ |
| 6 | ಶುಕ್ರವಾರ | ಪೂರಿ, ಸಾಗು, ಹಾಲು | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು(ಮಾಲ್ಟ್/ ಬೋರ್ನ್ವಿಟ) ಮತ್ತು ಮೊಳಕೆ ಒಡೆದ ಕಾಳು (ಹಸಿರು ಕಾಳು) | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ,ಸಿಹಿ. |
| 7 | ಶನಿವಾರ | ಶಾವಿಗೆ ಬಾತ್, ಹಾಲು | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ | ಹಾಲು(ಮಾಲ್ಟ್/ ಬೋರ್ನ್ವಿಟ) ಮತ್ತು ಪಕೋಡ/ಬಜ್ಜಿ | ಚಪಾತಿ/ರೊಟ್ಟಿ/ರಾಗಿಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ,ಸಿಹಿ. |

- **ಎಲ್ಲಾ ಮಕ್ಕಳಿಗೆ ಉತ್ತಮ ಗುಣಮಟ್ಟದ ಪೌಷ್ಟಿಕ ಆಹಾರ ನೀಡುವುದು. ಭೇಟಿ ನೀಡಿದ ಅಧಿಕಾರಿಗಳು ಈ ಬಗ್ಗೆ ಭೇಟಿಯ ಸಮಯದಲ್ಲಿ ಕಡ್ಡಾಯವಾಗಿ ಪರಿಶೀಲಿಸುವುದು ಹಾಗೂ ವರದಿಯಲ್ಲಿ ಸ್ಪಷ್ಟವಾಗಿ ನಮೂದಿಸುವುದು.**
- ಆಯಾ ಋತುಮಾನದಲ್ಲಿ ಸಿಗುವ ಹಣ್ಣುಗಳನ್ನು ನೀಡಬೇಕು (ಎಲ್ಲ ತರಹದ ಹಣ್ಣುಗಳು,
- ವಾರಕ್ಕೆ ಮೂರು ಬಾರಿ)
- ಎಲ್ಲಾ ರೀತಿಯ ತರಕಾರಿಗಳನ್ನು ಬಳಸಬೇಕು.
- ವಾರಕ್ಕೆ ಎರಡು ಬಾರಿ ಬಾಳೆಹಣ್ಣು/ಮೊಟ್ಟೆ ನೀಡಬೇಕು.
- ಹಬ್ಬ-ಹರಿದಿನಗಳಲ್ಲೂ ವಿಶೇಷವಾಗಿ ಹಬ್ಬ ಆಚರಿಸಿ ಸ್ವೀಟ್ಸ್ ನೀಡಬೇಕು.

### 3. ಔಪಚಾರಿಕ ಶಿಕ್ಷಣ ನೀಡಲು ಮುಂದೆ ಬಂದ ಮದರಸಗಳಿಗೆ (9 NRST)

ಔಪಚಾರಿಕ ಶಾಲೆಗಳಲ್ಲಿ ದಾಖಲಾಗದೇ ಮದರಸಗಳಲ್ಲಿ ಕೇವಲ ಧಾರ್ಮಿಕ ಶಿಕ್ಷಣ ಕಲಿಯುತ್ತಿರುವ 7–14 ವಯೋಮಾನದ ಮಕ್ಕಳು ಶಾಲೆಯಿಂದ ಹೊರಗೆ ಉಳಿದ ಮಕ್ಕಳೆಂದು ಖಚಿತಪಟ್ಟಲ್ಲಿ ಮತ್ತು ಈ ಮಕ್ಕಳ ವಿದ್ಯಾಭ್ಯಾಸಕ್ಕೆ ಸರ್ಕಾರವು ಅನುದಾನವನ್ನು ನೀಡುತ್ತಿಲ್ಲ ಎಂದು ಖಚಿತಪಟ್ಟಲ್ಲಿ ಹಾಗೂ ಸದರಿ ಸಂಸ್ಥೆಗಳು ಔಪಚಾರಿಕ ಶಿಕ್ಷಣ ನೀಡಲು ಮುಂದೆ ಬಂದರೆ – ಇವರ ಜೊತೆ ಒಡಂಬಡಿಕೆ ಮಾಡಿಕೊಂಡು ಕಾರ್ಯಕ್ರಮ ಪ್ರಾರಂಭಿಸುವುದು. ಕಾರ್ಯಕ್ರಮವನ್ನು ಪ್ರಾರಂಭಿಸಿದ ನಂತರ ಬಿಇಒಗಳಿಂದ ದೃಢೀಕೃತ ಮಕ್ಕಳ ವಿವರವುಳ್ಳ ಪಟ್ಟಿಯಂತೆ ಪ್ರಗತಿ ವರದಿಯನ್ನು ಪಡೆದ ನಂತರವೇ ನಿಯಮಾನುಸಾರ ಆ ಕೇಂದ್ರಗಳಿಗೆ ಅನುದಾನವನ್ನು ನೀಡುವುದು ಹಾಗು ಈ ಕೇಂದ್ರಕ್ಕೆ ಶಿಕ್ಷಕರನ್ನು ತಪ್ಪದೇ ನಿಯೋಜಿಸತಕ್ಕದ್ದು. ಹಿಂದಿನ ಮತ್ತು ಪ್ರಸಕ್ತ ಸಾಲಿನ ಮದರಸ ಕೇಂದ್ರಗಳಿಗೆ 09 ತಿಂಗಳಿಗೆ ಒಂದು ಮಗುವಿಗೆ ರೂ.4500 ರಂತೆ ಘಟಕ ವೆಚ್ಚ ಮಂಜೂರಾಗಿರುತ್ತದೆ. **ಘಟಕ ವೆಚ್ಚದ ವಿವರವನ್ನು ಅನುಬಂಧ–4ರಲ್ಲಿ ನೀಡಿದೆ.**

## ಅನುಬಂಧ – 4

**ಮದರಸ (9 ತಿಂಗಳ ವಸತಿರಹಿತ ವಿಶೇಷ ತರಬೇತಿ)**

**ಒಂದು ಕೇಂದ್ರದಲ್ಲಿ 25 ಮಕ್ಕಳಂತೆ (9 ತಿಂಗಳಿಗೆ)**

| | |
|---|---|
| ಸ್ನಾಕ್ಸ್ (ರೂ. 10 X 250 ದಿನ) | 2500 |
| ಸ್ವಯಂಸೇವಕರಿಗೆ ಗೌರವಧನ (3000 X 10 ) (ಗರಿಷ್ಠ ಮೊತ್ತ) | 1200 |
| ಸಾದಿಲ್ವಾರು / ಟಿ.ಎಲ್.ಎಂ | 200 |
| ಮಕ್ಕಳಿಗೆ ಬರೆಯುವ ಸಾಮಗ್ರಿ | 200 |
| ದಾಖಲೀಕರಣ | 100 |
| ಶೈಕ್ಷಣಿಕ ಪ್ರವಾಸ | 100 |
| ಕೈಪಿಡಿ ಮುದ್ರಣಕ್ಕಾಗಿ ರಾಜ್ಯ ಕಛೇರಿಯ ಬಳಕೆಗಾಗಿ | 200 |
| **ಒಟ್ಟು ರೂ.** | **4500** |
| | |

**4. 6 ತಿಂಗಳ ವಸತಿರಹಿತ ವಿಶೇಷ ತರಬೇತಿ (6 NRST):**

ಶಾಲೆಯಿಂದ ಹೊರಗುಳಿದ ಮಗು ವಸತಿಯುತ ಕೇಂದ್ರದಲ್ಲಿರಲು ಇಚ್ಛಿಸದೆ ವಸತಿರಹಿತ ಕೇಂದ್ರದಲ್ಲಿ ಇರಲು ಇಚ್ಛಿಸಿದ್ದಲ್ಲಿ ಈ ಕಾರ್ಯತಂತ್ರವನ್ನು ಅಳವಡಿಸಬಹುದು. ಈ ಮಕ್ಕಳಿಗೆ ಪಾಠ ಮಾಡುವಾಗ ಚಿಣ್ಣರ ಅಂಗಳ ಅಭ್ಯಾಸ ಪುಸ್ತಕ ಮತ್ತು ಹಿರಿಯರ ಚಿಣ್ಣರ ಅಂಗಳ ಅಭ್ಯಾಸ ಪುಸ್ತಕಗಳನ್ನು ಬಳಸಬೇಕು. ಒಂದು ಕೇಂದ್ರದಲ್ಲಿ ಗರಿಷ್ಠ 25 ಮಕ್ಕಳು ಇರುವಂತೆ ವ್ಯವಸ್ಥೆಗೊಳಿಸಬೇಕು. ಪ್ರಸ್ತುತ ಕೇಂದ್ರಗಳಿಗೆ (ಇಲಾಖೆ/ಎನ್.ಜಿ.ಒ ನಡೆಸುವ) ತಪ್ಪದೆ ಇಲಾಖೆಯಿಂದ ಒಬ್ಬ ಶಿಕ್ಷಕರನ್ನು ನಿಯೋಜಿಸತಕ್ಕದ್ದು.

**ವಿಶೇಷ ಸೂಚನೆ:**

- **ಈ ತರಬೇತಿ ಕೇಂದ್ರಗಳಿಗೆ ನುರಿತ ಮತ್ತು ಅನುಭವ ಇರುವ ಶಿಕ್ಷಕರನ್ನು ನಿಯೋಜಿಸುವುದು.**
- **ಪ್ರತಿಶತ 5 ರಷ್ಟು ಹಣ ಮರು ಹೊಂದಾಣಿಕೆ ಮಾಡಿಕೊಳ್ಳಬಹುದು.**
- **ಮಕ್ಕಳಿಗೆ ಗುಣಮಟ್ಟದ ಆಹಾರವನ್ನು ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಂಡು ಅದರಂತೆ ನೀಡುವುದು.**
- **ಒಬ್ಬರು ಸ್ವಯಂಸೇವಕರನ್ನು ನೇಮಿಸಿಕೊಳ್ಳುವುದು.**
  **(ಘಟಕ ವೆಚ್ಚದ ವಿವರವನ್ನು ಅನುಬಂಧ 1ರಲ್ಲಿ ನೀಡಿದೆ)**

## ಅನುಬಂಧ – 1

**6 ತಿಂಗಳ ವಸತಿರಹಿತ ವಿಶೇಷ ತರಬೇತಿ(ಸ್ವಯಂ ಸೇವಕಸಹಿತ) (NRST)**

| | |
|---|---|
| ಸ್ವಯಂಸೇವಕರಿಗೆ ಗೌರವ ಸಂಭಾವನೆ (ಗರಿಷ್ಟ ರೂ 3000) | 720 |
| ಸ್ನ್ಯಾಕ್ಸ್ | 900 |
| ಲೇಖನ ಸಾಮಗ್ರಿ (ಮಗುವಿಗೆ) | 360 |
| ಟಿಎಲ್ಎಂ | 200 |
| ಕೇಂದ್ರದ ಸಾದಿಲ್ವಾರು | 220 |
| ದಾಖಲೀಕರಣ | 200 |
| ಶೈಕ್ಷಣಿಕ ಪ್ರವಾಸ | 200 |
| ಚಿಣ್ಣರ ಅಂಗಳ ಕೈಪಿಡಿ ಮುದ್ರಣಕ್ಕಾಗಿ ರಾಜ್ಯ ಕಛೇರಿಯ ಬಳಕೆಗಾಗಿ | 200 |
| **ಒಟ್ಟು ರೂ.** | **3000** |

**5. ವಲಸಿತ ಕುಟುಂಬಗಳ ಮಕ್ಕಳಿಗಾಗಿ ವಿಶೇಷ ತರಬೇತಿ (ಟೆಂಟ್ ಶಾಲೆ)**

- ವಲಸೆ ಬರುವ ಜನ ತಮ್ಮೊಂದಿಗೆ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ ಮಗುವನ್ನು ಕರೆತರುತ್ತಾರೆ. ಇದರಿಂದ ಇಂತಹ ವಿದ್ಯಾರ್ಥಿಗಳ ಕಲಿಕೆ ಮಟ್ಟದ ಮೇಲೆ ವಲಸೆ ಪ್ರತಿಕೂಲ ಪರಿಣಾಮ ಬೀರುವುದು. ಹೆಚ್ಚು ಸಂದರ್ಭಗಳಲ್ಲಿ ಶಾಲೆಯನ್ನು ಮಧ್ಯದಲ್ಲೆ ಬಿಡುವವರ ಸಂಖ್ಯೆ ಹೆಚ್ಚಳವಾಗುತ್ತಿದೆ.
- ಗ್ರಾಮಾಂತರ ಪ್ರದೇಶದಿಂದ ನಗರ ಪ್ರದೇಶಕ್ಕೆ ವಿವಿಧ ಕಾರಣಗಳಿಂದ ವಲಸೆ ಬರುವ ಕುಟುಂಬಗಳು, ಅವರ ಜೊತೆಯಲ್ಲಿ ಮಕ್ಕಳನ್ನು ಕರೆತಂದಿರುತ್ತಾರೆ ಹಾಗೂ ಕೆಲವೊಮ್ಮೆ ಮಕ್ಕಳೇ ಸ್ವತಂತ್ರವಾಗಿ ವಲಸೆ ಬಂದಿರುತ್ತಾರೆ. ಇಂತಹ ಮಕ್ಕಳನ್ನು ನಿಖರವಾಗಿ ಗುರುತಿಸಿ ಈ ಮಕ್ಕಳಿಗೂ ಶಿಕ್ಷಣ ಒದಗಿಸುವುದು ಅಗತ್ಯವಾಗಿದೆ. ನಗರ ಪ್ರದೇಶದ ಮಾರುಕಟ್ಟೆ ಪ್ರದೇಶ, ಕೈಗಾರಿಕೆ ಪ್ರದೇಶ, ಕೊಳಗೇರಿ, ಕಟ್ಟಡ ನಿರ್ಮಾಣ ಪ್ರದೇಶ, ಬಸ್, ರೈಲು ನಿಲ್ದಾಣ ಇತ್ಯಾದಿ ಪ್ರದೇಶಗಳಲ್ಲಿ ಈ ಮಕ್ಕಳು ಹೆಚ್ಚಾಗಿ ಕಂಡುಬರುತ್ತಿದ್ದು, ಸದರಿ ಮಕ್ಕಳನ್ನು ಶಾಲೆಗೆ

ಕರೆತರಬೇಕಾಗಿದೆ. ಶಾಲಾ ಅವಧಿಯಲ್ಲಿ ಯಾವುದೇ ಮಗು(6-14 ವರ್ಷ) ಶಾಲೆ ಬಿಟ್ಟು ಬೇರೆ ಪ್ರದೇಶಗಳಲ್ಲಿ ಕಂಡುಬರಬಾರದು. ಈ ಮಕ್ಕಳು ಶಾಲೆಯಲ್ಲಿದ್ದು ಕಲಿಯುವಂತೆ ವ್ಯವಸ್ಥೆ ರೂಪಿಸಬೇಕಾಗಿದೆ. ಈ ಮಕ್ಕಳನ್ನು ಪತ್ತೆ ಹಚ್ಚಲು, ಈ ಮಕ್ಕಳ ಮೇಲೆ ನಿಗಾವಹಿಸಲು ನಗರ/ಪಟ್ಟಣ ಪ್ರದೇಶಗಳಲ್ಲಿ ಕನಿಷ್ಠ 4 ಜನರ (ಸಿ.ಆರ್.ಪಿ, ಶಿಕ್ಷಕ/ಶಿಕ್ಷಕಿ, ಕಾರ್ಮಿಕ ಇಲಾಖೆಯಿಂದ ಒಬ್ಬರು, ಆರೋಗ್ಯ ಇಲಾಖೆಯಿಂದ ಒಬ್ಬರ ತಂಡ ರಚಿಸುವುದು) ಅಗತ್ಯಕ್ಕೆನುಸಾರವಾಗಿ ತಂಡಗಳನ್ನು ರಚಿಸಿ, ಕನಿಷ್ಠ 05 ಮಕ್ಕಳು ಸಿಕ್ಕಿದರು, ಅವರಿಗೆ ಒಂದು ಟೆಂಟ್ ಶಾಲೆ ತೆರೆದು ಶಿಕ್ಷಣ ಒದಗಿಸುವುದು.

- ವಲಸೆ ಬರುವ/ಹೋಗುವ ಕುಟುಂಬಗಳ ಬಗ್ಗೆ ಸರಿಯಾದ ಮ್ಯಾಪಿಂಗ್ ಮಾಡುವ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಕೆಳಕಂಡ ನಮೂನೆಯಲ್ಲಿ ಮಾಹಿತಿಯನ್ನು ಸಂಗ್ರಹಿಸುವುದು ಹಾಗೂ ಸಿ.ಆರ್.ಸಿ/ಬಿ.ಆರ್.ಸಿ ಕೇಂದ್ರಗಳಲ್ಲಿ ದಾಖಲೆ ನಿರ್ವಹಿಸುವುದು.

**ಘಟಕ ವೆಚ್ಚದ ವಿವರವನ್ನು ಅನುಬಂಧ-5 ರಲ್ಲಿ ಹಾಗೂ ವಲಸೆ ಕುಟುಂಬದ ಮಕ್ಕಳ ಮಾಹಿತಿಯನ್ನು ನಮೂನೆ 1, 1ಎ, 2, 2ಎ ರಲ್ಲಿ ಈ ಕೆಳಕಂಡಂತೆ ನೀಡಿದೆ**

## ಅನುಬಂಧ – 5

**ವಲಸಿತ ಕುಟುಂಬಗಳ ಮಕ್ಕಳಿಗಾಗಿ ವಿಶೇಷ ತರಬೇತಿ (ಟೆಂಟ್ ಶಾಲೆ) (6 ತಿಂಗಳ ಅವಧಿಗೆ) (NRST)**

**ಒಂದು ಕೇಂದ್ರದಲ್ಲಿ 25 ಮಕ್ಕಳಂತೆ (6 ತಿಂಗಳಿಗೆ)**

| | |
|---|---|
| ಸ್ವಯಂಸೇವಕರಿಗೆ ಗೌರವ ಸಂಭಾವನೆ (ಗರಿಷ್ಟ ರೂ 3000) | 720 |
| ಸ್ನ್ಯಾಕ್ಸ್ | 900 |
| ಲೇಖನ ಸಾಮಗ್ರಿ (ಮಗುವಿಗೆ) | 360 |
| ಟಿಎಲ್‌ಎಂ | 200 |
| ಕೇಂದ್ರದ ಸಾದಿಲ್ವಾರು | 220 |
| ದಾಖಲೀಕರಣ | 200 |
| ಶೈಕ್ಷಣಿಕ ಪ್ರವಾಸ | 200 |
| ಚಿಣ್ಣರ ಅಂಗಳ ಕೈಪಿಡಿ ಮುದ್ರಣಕ್ಕಾಗಿ ರಾಜ್ಯ ಕಛೇರಿಯ ಬಳಕೆಗಾಗಿ | 200 |
| **ಒಟ್ಟು ರೂ.** | **3000** |

## ನಮೂನೆ-1

**ವಲಸೆ ಬರುವ ಕುಟುಂಬದ ಮಕ್ಕಳ ಮಾಹಿತಿ**

ಜಿಲ್ಲೆ------------ ಬ್ಲಾಕ್------------ ಕ್ಲಸ್ಟರ್--------------

| ಜನವಸತಿ ಪ್ರದೇಶದ ಹೆಸರು, ವಿಳಾಸ | ವಲಸೆ ಬಂದ ಕುಟುಂಬ ಗಳಲ್ಲಿರುವ ಮಕ್ಕಳ ವಿವರ | | | ಎಲ್ಲಿಂದ ವಲಸೆ ಬಂದಿದ್ದಾರೆ? | ಯಾವ ಕೆಲಸಕ್ಕೆ | ತಂಗುವ ಅವಧಿ | ಆಡುವ ಮಾತೃಭಾಷೆ | ಮಕ್ಕಳ ಶಿಕ್ಷಣಕ್ಕೆ ಮಾಡಲಾದ ವ್ಯವಸ್ಥೆ | ಷರಾ |
|---|---|---|---|---|---|---|---|---|---|
| | ಮಕ್ಕಳ ಹೆಸರು | ವಯಸ್ಸು | ಓದುತ್ತಿದ್ದ ತರಗತಿ | | | | | | |
| | | | | | | | | | |

## ನಮೂನೆ-1ಎ

**ವಲಸೆ ಹೋಗುವ ಕುಟುಂಬದ ಮಕ್ಕಳ ಮಾಹಿತಿ**

ಜಿಲ್ಲೆ ____________ ಬ್ಲಾಕ್ ____________ ಕ್ಲಸ್ಟರ್ ____________

| ಜನವಸತಿ ಪ್ರದೇಶದ ಹೆಸರು ವಿಳಾಸ | ವಲಸೆ ಹೋದ ಕುಟುಂಬ ಗಳಲ್ಲಿರುವ ಮಕ್ಕಳ ವಿವರ | | | ಎಲ್ಲಿಗೆ ವಲಸೆ ಹೋಗಿದ್ದಾರೆ? | ಯಾವ ಕೆಲಸಕ್ಕೆ | ತಂಗುವ ಅವಧಿ | ಆಡುವ ಮಾತೃಭಾಷೆ | ಮಕ್ಕಳ ಶಿಕ್ಷಣಕ್ಕೆ ಮಾಡಲಾದ ವ್ಯವಸ್ಥೆ | ಷರಾ |
|---|---|---|---|---|---|---|---|---|---|
| | ಮಕ್ಕಳ ಹೆಸರು | ವಯಸ್ಸು | ಓದುತ್ತಿದ್ದ ತರಗತಿ | | | | | | |
| | | | | | | | | | |

✓ ಗುಡಾರ ಶಾಲೆಗಳನ್ನು ವಲಸಿತ ಬಿಡಾರಗಳ ಸ್ಥಳದಲ್ಲಿ ಸ್ಥಾಪಿಸಬೇಕಾಗುತ್ತದೆ. ಗುಡಾರ ಶಾಲೆಯ ಮಕ್ಕಳು ಶಾಲೆಯನ್ನು ತೊರೆದ ಮಕ್ಕಳು ಎಂದು ಪರಿಭಾವಿಸಲಾಗಿದ್ದು, ಈ ಮಕ್ಕಳು ಔಪಚಾರಿಕ ಪಠ್ಯ ಕ್ರಮವನ್ನು ಅಭ್ಯಾಸ ಮಾಡುತ್ತಾರೆ.

ವಲಸೆ ಅವಧಿ ಸೀಮಿತವಾದದ್ದು ಎಂದು ಭಾವಿಸಿ ಗುಡಾರ ಶಾಲೆಗಳನ್ನು 6 ತಿಂಗಳ ವರೆಗೆ ನಡೆಸಬೇಕು ಎಂಬ ಯೋಜನೆ ಇದ್ದರೂ ಅನೇಕ ವೇಳೆ ಈ ಅವಧಿ ಕಡಿಮೆ ಆಗುವ ಸಾಧ್ಯತೆ ಇದೆ.

✓ ಇತರೆ ರಾಜ್ಯಗಳಿಗೆ ಹೋಗುವ ಮತ್ತು ಬೇರೆ ರಾಜ್ಯಗಳಿಂದ ಬರುವ ವಲಸೆ ಕುಟುಂಬಗಳ ಮಕ್ಕಳ ಮಾಹಿತಿಯನ್ನು ಕೆಳಗಿನ ನಮೂನೆಯಲ್ಲಿ ಪ್ರತಿ ತಿಂಗಳು ಸಂಬಂಧಿಸಿದ ಜಿಲ್ಲಾ ಹಂತದ ಅಧಿಕಾರಿಗಳ ದೃಢೀಕರಣದೊಂದಿಗೆ ಈ ಕಛೇರಿಗೆ ಕಳುಹಿಸುವುದು.

**ನಮೂನೆ– 2 (ವಲಸೆ ಬರುವ ಕುಟುಂಬಗಳ ಮಕ್ಕಳ ಮಾಹಿತಿ)**

| ಕ್ರ. ಸಂ | ಬ್ಲಾಕ್ ಹೆಸರು | ವಲಸೆ ಬರುವ ಕುಟುಂಬಗಳ ಸಂಖ್ಯೆ | ವಲಸೆ ಬರುವ ಮಕ್ಕಳ ಸಂಖ್ಯೆ (6 ರಿಂದ 14 ವಯಸ್ಸಿನ) | ವಲಸೆ ಬರುವ ಅವಧಿ (ಯಾವಾಗ ಬರುವರು) | ವಲಸೆ ಬಂದವರು ಉಳಿಯುವ ಅವಧಿ | ಯಾವ ಉದ್ದೇಶಕ್ಕಾಗಿ ವಲಸೆ ಬರುವರು (ಕೈಗೊಳ್ಳುವ ವೃತ್ತಿ) | ಯಾವ ರಾಜ್ಯದಿಂದ |
|---|---|---|---|---|---|---|---|
| 1 | | | | | | | |
| 2 | | | | | | | |
| | ಜಿಲ್ಲೆಯ ಒಟ್ಟು | | | | | | |

**ನಮೂನೆ– 2ಎ (ವಲಸೆ ಹೋಗುವ ಕುಟುಂಬಗಳ ಮಕ್ಕಳ ಮಾಹಿತಿ)**

| ಕ್ರ. ಸಂ. | ಬ್ಲಾಕ್ ಹೆಸರು | ವಲಸೆ ಹೋಗುವ ಕುಟುಂಬಗಳ ಸಂಖ್ಯೆ | ವಲಸೆ ಹೋಗುವ ಮಕ್ಕಳ ಸಂಖ್ಯೆ (6 ರಿಂದ 14 ವಯಸ್ಸಿನ) | ವಲಸೆ ಹೋಗುವ ಅವಧಿ (ಯಾವಾಗ ಹೋಗುವರು) | ಎಷ್ಟು ಅವಧಿಯ ವರೆಗೆ ವಲಸೆ ಹೋಗುವರು | ಯಾವ ಉದ್ದೇಶಕ್ಕಾಗಿ ವಲಸೆ ಹೋಗುವರು (ಕೈಗೊಳ್ಳುವ ವೃತ್ತಿ) | ಯಾವ ರಾಜ್ಯಕ್ಕೆ |
|---|---|---|---|---|---|---|---|
| 1 | | | | | | | |
| 2 | | | | | | | |
| | **ಜಿಲ್ಲೆಯ ಒಟ್ಟು** | | | | | | |

✓ ಕಾರ್ಯತಂತ್ರವನ್ನು ಇಲಾಖಾ ವತಿಯಿಂದ ನಿರ್ವಹಿಸಲಾಗುತ್ತಿದ್ದು, ಈ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಸರ್ಕಾರೇತರ ಸಂಸ್ಥೆಗಳು ಟೆಂಟ್ ಶಾಲೆಗಳನ್ನು ನಡೆಸಲು ಮುಂದೆ ಬಂದಲ್ಲಿ, ಅವರಿಗೂ ಅವಕಾಶ ಕಲ್ಪಿಸುವುದು.

**6. ಶಾಲಾಧಾರಿತ ವಿಶೇಷ ತರಬೇತಿ (ಸ್ವಯಂ ಸೇವಕಸಹಿತ) (6 ತಿಂಗಳ ಅವಧಿಗೆ)**

- 2017–18 ನೇ ಸಾಲಿಗೆ ಎಂ.ಹೆಚ್.ಆರ್.ಡಿ ವತಿಯಿಂದ ಒಂದು ಜನ ವಸತಿ ಪ್ರದೇಶದಲ್ಲಿ/ ಶಾಲಾ ವ್ಯಾಪ್ತಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ 6 ರಿಂದ 25 ಇದ್ದಲ್ಲಿ, ಅಂತಹ ಕಡೆ ಒಬ್ಬರು ಸ್ವಯಂ ಸೇವಕರನ್ನು ನಿಯೋಜಿಸಿಕೊಳ್ಳಲು 6 ತಿಂಗಳ ಅವಧಿಗೆ ಒಂದು ಮಗುವಿಗೆ ರೂ.3000 ಘಟಕ ವೆಚ್ಚವನ್ನು ನಿಗದಿಪಡಿಸಿದೆ.
- ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಪಿ.ಯು.ಸಿ/ಡಿ.ಎಡ್ ತರಬೇತಿ ಹೊಂದಿರುವ ಒಬ್ಬ ನಿರುದ್ಯೋಗಿ ವ್ಯಕ್ತಿಯನ್ನು ಸ್ವಯಂ ಸೇವಕರನ್ನಾಗಿ ಎಸ್.ಡಿ.ಎಂ.ಸಿ ಸಲಹೆ ಮೇರೆಗೆ ಎನ್.ಜಿ.ಒ ಮೂಲಕ ನೇಮಕ ಮಾಡುವುದು ಅವರಿಗೆ, ಈಗಾಗಲೇ ಗುರುತಿಸಿರುವ ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಹಾಗೂ ಮಕ್ಕಳ ಕಲಿಕಾ ಕೊರತೆಗಳ ಬಗ್ಗೆ ಹಾಗೂ ವಿಶೇಷ ತರಬೇತಿಗಾಗಿ ಉಪಯೋಗಿಸಬಹುದಾದ ಸಾಹಿತ್ಯದ ಬಗ್ಗೆ ತರಬೇತಿ ನೀಡುವುದು. ಸ್ವಯಂ ಸೇವಕರಿಗೆ ಶಿಕ್ಷಕರ ಕೈಪಿಡಿ ನೀಡುವುದು.
- ಮಕ್ಕಳಿಗೆ ಶಾಲೆಯಲ್ಲೇ ಕಲಿಕೆಯ ಪರಿಸರವನ್ನು ಸೃಷ್ಟಿಸಿ ಸ್ವಯಂ ಸೇವಕರ ಸಹಾಯದೊಂದಿಗೆ ಕಲಿಕಾ ಪ್ರಗತಿಯನ್ನು ಹೆಚ್ಚಿಸುವುದು.
- ತರಗತಿಗಳಲ್ಲಿ ಮಕ್ಕಳು ದಾಖಲಾದ ಮೇಲೆ ಸ್ವಯಂ ಸೇವಕರನ್ನು ಬಿಡುಗಡೆಗೊಳಿಸಿ ಸ್ವತಃ ಶಿಕ್ಷಕರೇ ಈ ಮಕ್ಕಳ ಕಲಿಕೆಯ ಪ್ರಕ್ರಿಯೆಯನ್ನು ಕಾಲಕಾಲಕ್ಕೆ ಖಾತ್ರಿಪಡಿಸಿಕೊಳ್ಳಬೇಕು ಕೊರತೆಗಳಿದ್ದರೆ ಅದನ್ನು ತಾವೇ ಬಗೆಹರಿಸಿಕೊಳ್ಳಬೇಕು.
- ಉಳಿದಂತೆ ಶಾಲಾಧಾರಿತ ವಿಶೇಷ ತರಬೇತಿ (ಸ್ವಯಂ ಸೇವಕರಿಲ್ಲದೇ) ಯಲ್ಲಿ ನೀಡಿರುವ ಸೂಚನೆಗಳನ್ನು ಪಾಲಿಸುವುದು.

**ವಿಶೇಷ ಸೂಚನೆ:**

- **ಈ ಕೇಂದ್ರಗಳಿಗೆ ನುರಿತ ಮತ್ತು ಪ್ರಸ್ತುತ ಕೆಲಸದಲ್ಲಿ ಅನುಭವ ಇರುವ ಶಿಕ್ಷಕರನ್ನು ನಿಯೋಜಿಸುವುದು.**
- **ಒಂದು ಕೇಂದ್ರದಲ್ಲಿ 25 ಮಕ್ಕಳಿರುವಂತೆ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ.**
- **ಮಧ್ಯಾಹ್ನದ ಊಟವನ್ನು ಮಧ್ಯಾಹ್ನದ ಉಪಹಾರ ಯೋಜನೆಯಡಿ ಭರಿಸುವುದು.**

– ಘಟಕ ವೆಚ್ಚದ ವಿವರವನ್ನು ಅನುಬಂಧ–6 ರಲ್ಲಿ ನೀಡಿದೆ.

**ಅನುಬಂಧ – 6**

**ಶಾಲಾಧಾರಿತ ವಿಶೇಷ ತರಬೇತಿ (ಸ್ವಯಂ ಸೇವಕಸಹಿತ) (6 ತಿಂಗಳ ಅವಧಿಗೆ)**

| | |
|---|---|
| ಸ್ವಯಂಸೇವಕರಿಗೆ ಗೌರವ ಸಂಭಾವನೆ (ಗರಿಷ್ಟ ರೂ 3000) | 720 |
| ಸ್ನ್ಯಾಕ್ಸ್ | 900 |
| ಲೇಖನ ಸಾಮಗ್ರಿ (ಮಗುವಿಗೆ) | 360 |
| ಟಿಎಲ್‌ಎಂ | 200 |
| ಕೇಂದ್ರದ ಸಾದಿಲ್ವಾರು | 220 |
| ದಾಖಲೀಕರಣ | 200 |
| ಶೈಕ್ಷಣಿಕ ಪ್ರವಾಸ | 200 |
| ಚಿಣ್ಣರ ಅಂಗಳ ಕೈಪಿಡಿ ಮುದ್ರಣಕ್ಕಾಗಿ ರಾಜ್ಯ ಕಛೇರಿಯ ಬಳಕೆಗಾಗಿ | 200 |
| **ಒಟ್ಟು ರೂ.** | **3000** |

7. **06 ತಿಂಗಳ ಋತುಮಾನ ವಸತಿಯುತ ವಿಶೇಷ ತರಬೇತಿ:– (SRST)**

ಆರು ತಿಂಗಳ ಋತುಮಾನ ವಸತಿಯುತ ವಿಶೇಷ ತರಬೇತಿಯು ವಲಸೆ ಹೋಗುವ ಕುಟುಂಬಗಳ ಮಕ್ಕಳಿಗಾಗಿ ಇರುವ ವಸತಿಯುತ ಕೇಂದ್ರವಾಗಿದೆ. ಸದರಿ ಮಕ್ಕಳ ವಿದ್ಯಾಭ್ಯಾಸ ಕುಂಠಿತವಾಗಬಾರದು ಎಂದು ಈ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಈ ಕೇಂದ್ರದ ಮಗು ಈಗಾಗಲೇ ಶಾಲೆಗೆ ಹಾಜರಾಗುತ್ತಿದ್ದು, ತನ್ನ ಕುಟುಂಬದ ಅನುಪಸ್ಥಿತಿಯ ಸಂದರ್ಭದಲ್ಲಿ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಈ ಕೇಂದ್ರದಲ್ಲಿ ನೀಡಲಾಗುತ್ತದೆ. ಆದ ಕಾರಣ ವಲಸೆ ಪ್ರಾರಂಭವಾಗುವ ಮೊದಲು ಈ ಕೇಂದ್ರಗಳನ್ನು ತೆರೆಯುವ ಬಗ್ಗೆ ಮೊದಲೇ ಪೋಷಕರಿಗೆ, ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸುವುದು. **ಈ ವರ್ಷ ಆರು ತಿಂಗಳ ಋತುಮಾನ ವಸತಿಯುತ ಕೇಂದ್ರ (SRST) ಕಾರ್ಯಕ್ರಮದ ಅವಧಿಯನ್ನು ಮೂರು ತಿಂಗಳಿಗೆ ಕಡಿತಗೊಳಿಸಲಾಗಿದೆ.**

**ವಿಶೇಷ ಸೂಚನೆ:**

- ಈ ಕೇಂದ್ರಗಳಿಗೆ ನುರಿತ ಮತ್ತು ಪ್ರಸ್ತುತ ಕೆಲಸದಲ್ಲಿ ಅನುಭವ ಇರುವ ಶಿಕ್ಷಕರನ್ನು ನಿಯೋಜಿಸುವುದು.
- ಒಂದು ಕೇಂದ್ರದಲ್ಲಿ 50 ಮಕ್ಕಳಿರುವಂತೆ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ.
- ಮಧ್ಯಾಹ್ನದ ಊಟವನ್ನು ಹತ್ತಿರದ ಶಾಲೆಯ ಮಧ್ಯಾಹ್ನದ ಉಪಹಾರ ಯೋಜನೆಯಡಿ ಭರಿಸುವುದು.
- ಮಕ್ಕಳ ಸಂಖ್ಯೆಯನ್ನು ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ನಿಗದಿಗೊಳಿಸಬಹುದು. ಹಾಗೂ ಖರ್ಚು ಮಕ್ಕಳ ಸಂಖ್ಯೆಗೆ ಅನುಗುಣವಾಗಿರತಕ್ಕದ್ದು.
- ತಿಂಗಳಿಗೆ ಒಂದರಂತೆ ಜೀವನ ಕೌಶಲ್ಯ ತರಬೇತಿಯನ್ನು 10 ರಿಂದ 13 ವಯೋಮಾನದ ಮಕ್ಕಳಿಗೆ ನೀಡುವುದು. ಉದಾಹರಣೆಗೆ ಯೋಗ, ಧ್ಯಾನ, ಪ್ರಾಣಾಯಾಮ, ಸಂಗೀತ ಇತ್ಯಾದಿ.

ಘಟಕ ವೆಚ್ಚದ ವಿವರವನ್ನು ಅನುಬಂಧ 7ರಲ್ಲಿ ಮತ್ತು ಸೂಚನಾ ಫಲಕದಲ್ಲಿ ಪ್ರಕಟಿಸಬೇಕಾದ ಆಹಾರದ ಸೂಚಿತ ಪಟ್ಟಿಯನ್ನು ನೀಡಿದೆ.

**ಅನುಬಂಧ – 7**

**6 ತಿಂಗಳ ಋತುಮಾನ ವಸತಿಯುತ ವಿಶೇಷ ತರಬೇತಿ:– (SRST)**

**ಘಟಕ ವೆಚ್ಚದ ಮರು ಹಂಚಿಕೆ. (ಪ್ರತಿ ಮಗುವಿಗೆ 3 ತಿಂಗಳಿಗೆ )**

| ಚಟುವಟಿಕೆಗಳಳು | | ಘಟಕ ವೆಚ್ಚ | 3 ತಿಂಗಳಿಗೆ ಕಡಿತಗೊಳಿಸಿದ ವೆಚ್ಚ | ಷರಾ |
|---|---|---|---|---|
| ಊಟಕ್ಕೆ / ಉಪಹಾರ | – | 5400 | 2700 | |
| ಸ್ವಯಂ ಸೇವಕರ ಗೌರವ ಸಂಭಾವನೆ | – | 840 | 400 | 1 ಕೇಂದ್ರಕ್ಕೆ ಒಬ್ಬ ಸ್ವಯಂ ಸೇವಕರಿಗೆ ಗೌರವ ಸಂಭಾವನೆ ಗರಿಷ್ಠ 3000 ಒಂದು ತಿಂಗಳಿಗೆ |
| ಸಹಾಯಕರ ಗೌರವ ಸಂಭಾವನೆ | – | 600 | 200 | 1 ಕೇಂದ್ರಕ್ಕೆ ಸಹಾಯಕರ ಗೌರವ ಸಂಭಾವನೆ ಗರಿಷ್ಠ ರೂ.2000/– 1 ತಿಂಗಳಿಗೆ |
| ದೈನಂದಿನ ವಸ್ತುಗಳು | – | 300 | 150 | |
| ಕೇಂದ್ರದ ಸಾದಿಲ್ವಾರು | – | 150 | 100 | |
| ವೈದ್ಯಕೀಯ | – | 115 | 50 | |
| ತುರ್ತು ನಿಧಿ | – | 50 | 0 | |
| ಮಗುವಿಗೆ ಲೇಖನ ಸಾಮಗ್ರಿ | – | 200 | 100 | |

| | | | | |
|---|---|---|---|---|
| ಗಟ್ಟಿಯಾದ ಸೂಟ್‌ಕೇಸ್/ಟ್ರಂಕ್ | – | 400 | 0 | ಹಿಂದಿನ ವರ್ಷ ಈ ಸೌಲಭ್ಯ ಪಡೆದ ವಿದ್ಯಾರ್ಥಿಗಳಿಗೆ ಈ ಬಾರಿ ಈ ಸೌಲಭ್ಯ ನೀಡಬಾರದು |
| ಒಂದು ಜೊತೆ ಬಟ್ಟೆ, ಟವೆಲ್ (ಇಲಾಖೆ ನೀಡುವ ಸಮವಸ್ತ್ರ ಜೊತೆಗೆ) | – | 400 | 350 | |
| ಶೂ, ಸಾಕ್ಸ್ | – | 300 | 300 | |
| ದಾಖಲೀಕರಣ (ಬ್ಯಾಡ್ಜ್, ಐ.ಡಿ ಕಾರ್ಡ್, ಐ.ಇ.ಪಿ, ವರದಿ) | – | 300 | 200 | |
| ಬೆಡ್ಡಿಂಗ್ | – | 500 | 300 | |
| ಜೀವನ ಕೌಶಲ್ಯ ತರಬೇತಿ, ಕೇಂದ್ರಗಳಲ್ಲಿ ತಿಂಗಳಿಗೆ ಒಂದರಂತೆ | – | 245 | 150 | |
| ಚಿಣ್ಣರ ಅಂಗಳ ಕೈಪಿಡಿ ಮುದ್ರಣಕ್ಕಾಗಿ ರಾಜ್ಯ ಕಛೇರಿಯ ಬಳಕೆಗಾಗಿ | – | 200 | 0 | |
| **ಒಟ್ಟು ರೂ.** | | **10000.00** | **5000.00** | |

**ಋತುಮಾನ ವಸತಿ (6 ಎಸ್.ಆರ್.ಟಿ) ಕೇಂದ್ರಗಳ ಸೂಚನಾ ಫಲಕದಲ್ಲಿ ಪ್ರಕಟಿಸಬೇಕಾದ ಆಹಾರದ ಸೂಚಿತ ಪಟ್ಟಿ**

| ಕ್ರ ಸಂ. | ವಾರ | ಬೆಳಗ್ಗಿನ ತಿಂಡಿ | ಮಧ್ಯಾಹ್ನದ ಊಟ | ಸಾಯಂಕಾಲದ ಲಘು ಉಪಹಾರ | ರಾತ್ರಿ ಊಟ |
|---|---|---|---|---|---|
| 1 | ಭಾನುವಾರ | ಇಡ್ಲಿ, ಸಾಂಬಾರು, ಚಟ್ನಿ ,ಹಾಲು | ಅನ್ನ. ಸಾರು, ಮಜ್ಜಿಗೆ. ಸಿಹಿ | ಹಾಲು ಮತ್ತು ಮೊಳಕೆ ಒಡೆದ ಕಾಳು | ಚಪಾತಿ/ಅನ್ನ ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ, ಸಿಹಿ. |
| 2 | ಸೋಮವಾರ | ಚಿತ್ರಾನ್ನ ಹಾಲು | ಅನ್ನ. ಸಾರು, ಮಜ್ಜಿಗೆ. ಸಿಹಿ | ಹಾಲು ಹಾಗೂ ಬಜ್ಜಿ | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ, ಪಲ್ಯ, ಸಾರು, ಮಜ್ಜಿಗೆ, ಉಪ್ಪಿನಕಾಯಿ |
| 3 | ಮಂಗಳವಾರ | ಉಪ್ಪಿಟ್ಟು, ಹಾಲು | ಅನ್ನ. ಸಾರು, ಮಜ್ಜಿಗೆ. ಸಿಹಿ | ಹಾಲು ಹಾಗು ಚುರುಮರಿ | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ ಪಲ್ಯ ಸಾರು, ಮಜ್ಜಿಗೆ ಉಪ್ಪಿನಕಾಯಿ |
| 4 | ಬುಧವಾರ | ಅವಲಕ್ಕಿ, ಹಾಲು | ಅನ್ನ. ಸಾರು, ಮಜ್ಜಿಗೆ. ಸಿಹಿ | ಹಾಲು ಹಾಗು ಅವಲಕ್ಕಿ ಚೂಡಾ | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ ಪಲ್ಯ ಸಾರು, ಮಜ್ಜಿಗೆ ಉಪ್ಪಿನಕಾಯಿ |
| 5 | ಗುರುವಾರ | ಪುಳಿಯೊಗರೆ, ಹಾಲು | ಅನ್ನ. ಸಾರು, ಮಜ್ಜಿಗೆ. ಸಿಹಿ | ಹಾಲು ಮತ್ತು ಬಿಸ್ಕತ್ | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ ಪಲ್ಯ ಸಾರು, ಮಜ್ಜಿಗೆ ಉಪ್ಪಿನಕಾಯಿ |
| 6 | ಶುಕ್ರವಾರ | ಪೂರಿ, ಸಾಗು, ಹಾಲು | ಅನ್ನ. ಸಾರು, ಮಜ್ಜಿಗೆ. ಸಿಹಿ | ಹಾಲು ಮತ್ತು ನೆನೆದ ಕಡಲೆಬೀಜ (ಶೇಂಗಾ) | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ ಪಲ್ಯ ಸಾರು, ಮಜ್ಜಿಗೆ ಉಪ್ಪಿನಕಾಯಿ |
| 7 | ಶನಿವಾರ | ಶಾವಿಗೆ ಬಾತ್, ಹಾಲು | ಅನ್ನ. ಸಾರು, ಮಜ್ಜಿಗೆ. ಸಿಹಿ | ಹಾಲು ಮತ್ತು ಬಾಳೆಹಣ್ಣು | ಚಪಾತಿ/ರೊಟ್ಟಿ/ರಾಗಿ ಮುದ್ದೆ, ಅನ್ನ ಪಲ್ಯ ಸಾರು, ಮಜ್ಜಿಗೆ ಉಪ್ಪಿನಕಾಯಿ |

- **ಎಲ್ಲಾ ಮಕ್ಕಳಿಗೆ ಉತ್ತಮ ಗುಣಮಟ್ಟದ ಪೌಷ್ಠಿಕ ಆಹಾರ ನೀಡುವುದು. ಭೇಟಿ ನೀಡಿದ ಅಧಿಕಾರಿಗಳು ಈ ಬಗ್ಗೆ ಭೇಟಿಯ ಸಮಯದಲ್ಲಿ ಕಡ್ಡಾಯವಾಗಿ ಪರಿಶೀಲಿಸುವುದು ಹಾಗೂ ವರದಿಯಲ್ಲಿ ಸ್ಪಷ್ಟವಾಗಿ ನಮೂದಿಸುವುದು.**
- ಭಾನುವಾರ/ ರಜೆದಿನಗಳಲ್ಲಿ ಮಧ್ಯಾಹ್ನದ ಬಿಸಿ ಊಟ ನೀಡದಿರುವ ಕಾರಣ ರಾತ್ರಿಯ ಹೊತ್ತು ನೀಡುವ ಊಟದಂತೆಯೇ ಮಧ್ಯಾಹ್ನದ ಊಟವನ್ನು ನೀಡಬೇಕಾಗಿದೆ.
- ಆಯಾ ಋತುಮಾನದಲ್ಲಿ ಸಿಗುವ ಹಣ್ಣುಗಳನ್ನು ನೀಡಬೇಕು (ಎಲ್ಲಾ ತರಹದ ಹಣ್ಣುಗಳು, ವಾರಕ್ಕೆ ಮೂರು ಬಾರಿ)
- ಎಲ್ಲಾ ರೀತಿಯ ತರಕಾರಿಗಳನ್ನು ಬಳಸಬೇಕು.
- ವಾರಕ್ಕೆ ಎರಡು ಬಾರಿ ಬಾಳೆಹಣ್ಣು/ಮೊಟ್ಟೆ ನೀಡಬೇಕು.
- ಹಬ್ಬ-ಹರಿದಿನಗಳಲ್ಲಿ ವಿಶೇಷವಾಗಿ ಹಬ್ಬ ಆಚರಿಸಿ ಸ್ವೀಟ್ಸ್ ನೀಡಬೇಕು.

**8. & 9) 3 ತಿಂಗಳ ವಸತಿಸಹಿತ ವಿಶೇಷ ತರಬೇತಿ (3 RST) ಮತ್ತು 3 ತಿಂಗಳ ವಸತಿರಹಿತ ವಿಶೇಷ ತರಬೇತಿ (3 NRST) :**

ಈ ಕಾರ್ಯತಂತ್ರ/ಚಟುವಟಿಕೆ ಅನುಷ್ಠಾನಕ್ಕೆ ಸಂಬಂಧಪಟ್ಟ ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸಶಿಅ/ ಒಓಎಸ್‌ಸಿ/ಸುತ್ತೋಲೆ/1/2017-18, ದಿನಾಂಕ:06.03.2017 ರಲ್ಲಿ ವಿವರವಾದ ಮಾಹಿತಿಯೊಂದಿಗೆ ಕಾರ್ಯತಂತ್ರ ಅನುಷ್ಠಾನಗೊಳಿಸುವ ಕುರಿತು ಮಾಹಿತಿಯನ್ನು ನೀಡಲಾಗಿದೆ. ಹಾಗೂ ಕಾರ್ಯತಂತ್ರವನ್ನು ಈಗಾಗಲೇ ಅನುಷ್ಠಾನಗೊಳಿಸಿದ್ದು, ವಿವರವಾದ ಪ್ರಗತಿ ಮಾಹಿತಿಯನ್ನು ನೀಡಲಾದ ನಮೂನೆಯಲ್ಲಿ ಸಲ್ಲಿಸಲು ತಿಳಿಸಿದೆ.

**ಗಮನಿಸಿ:**

1. ವಿಶೇಷ ತರಬೇತಿ ನೀಡುವ ಎಲ್ಲಾ ಕೇಂದ್ರದ ಮುಖ್ಯ ಶಿಕ್ಷಕರು, ಶಿಕ್ಷಕರು, ಸಿ.ಆರ್.ಪಿ., ಎಸ್.ಡಿ.ಎಂ.ಸಿ, ಇವರಿಗೆ ಕೇಂದ್ರ ಅನುಷ್ಠಾನಗೊಳಿಸುವ ಹಾಗೂ ನಿರ್ವಹಿಸಬೇಕಾದ ದಾಖಲೆಗಳ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡುವುದು.
2. ಶಾಲೆಯಿಂದ ಹೊರಗುಳಿದ ಮಕ್ಕಳ ಶಾಲಾವಾರು ಪಟ್ಟಿಯನ್ನು ಶಾಲಾ ಹಂತದಲ್ಲಿ ನಿರ್ವಹಿಸುವುದು. ಆಯಾ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ (ಎಸ್.ಡಿ.ಎಂ.ಸಿ) ಸದಸ್ಯರ ಗಮನಕ್ಕೆ ತರುವುದು.
3. ಈ ಪಟ್ಟಿಯನ್ನು ಎಸ್.ಡಿ.ಎಂ.ಸಿ.ಗಳು ಪುನರ್ ಪರಿಶೀಲಿಸಿ ತಮ್ಮ ವ್ಯಾಪ್ತಿಯಲ್ಲಿ ಯಾವುದೇ ಮಗು ಶಾಲೆಯಿಂದ ಹೊರಗುಳಿಯದಂತೆ ನೋಡಿಕೊಳ್ಳುವುದು.
4. ಪ್ರತಿ ಬ್ಲಾಕ್‌ನಲ್ಲಿ ಮಕ್ಕಳ ವಯಸ್ಸಿಗನುಗುಣವಾಗಿ ತರಗತಿವಾರು ಮಕ್ಕಳ ಪಟ್ಟಿಯನ್ನು ತಯಾರಿಸುವುದು.
5. ವಿಶೇಷ ತರಬೇತಿಗೆ ಅವಶ್ಯಕವಾದ ಕಲಿಕಾ ಸಾಮಗ್ರಿಗಳನ್ನು ವಿಷಯವಾರು / ತರಗತಿವಾರು ಸಿದ್ಧಪಡಿಸಿಕೊಳ್ಳುವುದು.
6. ವಿಶೇಷ ತರಬೇತಿಯನ್ನು ಆಯೋಜಿಸಲು ಅಗತ್ಯವಾದ ಸುರಕ್ಷಿತ ಸ್ಥಳಗಳನ್ನು ಗುರುತಿಸಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದು.
7. ಪ್ರತಿಯೊಂದು ಮಗುವಿಗೂ ವಿಶೇಷ ಗಮನ ಹರಿಸಿ ಹೆಚ್ಚಿನ ಆದ್ಯತೆಯೊಂದಿಗೆ ಮಕ್ಕಳು ಸರಳವಾಗಿ, ಸುಲಭವಾಗಿ ಮತ್ತು ವೇಗವಾಗಿ ಕಲಿಯಲು ಅನುವು ಮಾಡಿಕೊಡುವುದು.
8. ವಿಶೇಷ ತರಬೇತಿ ಕೇಂದ್ರಗಳಲ್ಲಿ, ವಿಶೇಷ ತರಬೇತಿ ನೀಡಲು ಕಡ್ಡಾಯವಾಗಿ ಶಿಕ್ಷಕರನ್ನು ಆಯ್ಕೆ ಮಾಡಿ ಕಲಿಕಾ ಸಾಮಗ್ರಿಗಳನ್ನು ಉಪಯೋಗಿಸಲು ಮಾರ್ಗದರ್ಶನ ನೀಡುವುದು.
9. ಎಲ್ಲಾ ಸ್ತರದ ಅಧಿಕಾರಿಗಳು ಖುದ್ದು ಮೇಲುಸ್ತುವಾರಿ ವಹಿಸಿ ಪ್ರತಿ ಕೇಂದ್ರದಲ್ಲಿ ಶಿಕ್ಷಕರು ಮತ್ತು ಮಕ್ಕಳ ಜೊತೆಯಲ್ಲಿ ವಿಶೇಷ ತರಬೇತಿ ನಡೆಯುತ್ತಿರುವ ಬಗ್ಗೆ ಗಮನ ಹರಿಸುವುದು.
10. ವಿಶೇಷ ತರಬೇತಿಯಲ್ಲಿ ಪಾಲ್ಗೊಂಡಿರುವ ಮಕ್ಕಳ ಕಲಿಕಾ ಮಟ್ಟವನ್ನು ಮೌಲ್ಯಮಾಪನ ಮಾಡಿ ಯಾವ ಮಕ್ಕಳು ಕನಿಷ್ಠ ನಿಗದಿತ ಕಲಿಕಾ ಮಟ್ಟವನ್ನು ತಲುಪಿರುವರೋ ಅಂತಹ ಮಕ್ಕಳನ್ನು 2017–18ನೇ ಶೈಕ್ಷಣಿಕ ಸಾಲಿನಲ್ಲಿಯೇ ಆದಷ್ಟು ಶೀಘ್ರವಾಗಿ ಅಂದರೆ (ಮೇ, ಜೂನ್, ಜುಲೈ, ಅಗಸ್ಟ್, ತಿಂಗಳಿನಲ್ಲಿ) ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ಕಡ್ಡಾಯವಾಗಿ ಸೇರಿಸುವುದು.
11. ಕನಿಷ್ಠ ನಿಗದಿತ ಕಲಿಕಾ ಮಟ್ಟವನ್ನು ತಲುಪದ ಮಕ್ಕಳಿಗೆ ಶಾಲಾ ಆಧಾರಿತ ತರಬೇತಿ ಮುಂದುವರೆಸಿ ಮತ್ತಷ್ಟು ಉತ್ತಮಗೊಳಿಸುವುದು.
12. ಶಾಲೆಯಿಂದ ಹೊರಗುಳಿದಿರುವ ಎಲ್ಲಾ ಮಕ್ಕಳು ವಿಶೇಷ ತರಬೇತಿಯ ಮೂಲಕ ಶಾಲಾ ಮುಖ್ಯವಾಹಿನಿಗೆ ಬಂದ ಮಕ್ಕಳು ಮತ್ತು ಈಗಾಗಲೇ ಶಾಲಾ ಮುಖ್ಯವಾಹಿನಿಯಲ್ಲಿರುವ ಮಕ್ಕಳು ಯಾವುದೇ ಕಾರಣಕ್ಕೆ ಮತ್ತೆ ಶಾಲೆ ಬಿಡದಂತೆ ಅಗತ್ಯ ಸೌಲಭ್ಯಗಳಾದ ಪಠ್ಯಪುಸ್ತಕ, ಸಮವಸ್ತ್ರ, ನೋಟ್ ಪುಸ್ತಕ, ಲೇಖನ ಸಾಮಗ್ರಿ, ಪೌಷ್ಠಿಕವಾದ ಬಿಸಿಯೂಟ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಮಾನವೀಯತೆ ಮತ್ತು ಬದುಕನ್ನು ರೂಪಿಸಿಕೊಳ್ಳಲು ಅಗತ್ಯವಾದ ಗುಣಾತ್ಮಕ ಶಿಕ್ಷಣವನ್ನು ನೀಡಲು ಒಂದು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿಕೊಳ್ಳುವುದು.
13. ಇತರೆ ಇಲಾಖೆಗಳು ನೀಡುತ್ತಿರುವ ಎಲ್ಲಾ ಸವಲತ್ತುಗಳ ಬಗ್ಗೆ ವ್ಯಾಪಕ ಪ್ರಚಾರ ನೀಡಿ ಪೋಷಕರಿಗೆ ಹಾಗೂ ಮಕ್ಕಳಿಗೆ ಸವಲತ್ತುಗಳು ಸಿಗುವಂತೆ ಕ್ರಮವಹಿಸುವುದು ಹಾಗೂ ಅರಿವು ಮೂಡಿಸುವುದು.
14. ಇತರೆ ರಾಜ್ಯಗಳಿಂದ ವಲಸೆ ಬಂದಿರುವ ಮಕ್ಕಳು ಹಾಗೂ ನಮ್ಮ ರಾಜ್ಯದಿಂದ ಇತರೆ ರಾಜ್ಯಗಳಿಗೆ ವಲಸೆ ಹೋಗಿರುವ ಮಕ್ಕಳ ಮಾಹಿತಿಯನ್ನು ಆಗಿಂದಾಗ್ಗೆ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ನೀಡುವುದು. ಹಾಗೂ ಈ ಮಕ್ಕಳಿಗೆ ಕೂಡಲೇ ಕ್ರಮ ತೆಗೆದುಕೊಂಡು, ಕ್ರಮ ವಹಿಸಿದ ಬಗ್ಗೆ ಮಾಹಿತಿಯನ್ನು ರಾಜ್ಯ ಕಛೇರಿಗೆ ತಪ್ಪದೇ ಸಲ್ಲಿಸುವುದು.
15. ಎನ್.ಜಿ.ಓ ಗಳ ಮೂಲಕ ಕಾರ್ಯಕ್ರಮ ಅನುಷ್ಠಾನ ಮಾಡಲು ಸಾಧ್ಯವಿಲ್ಲದ್ದಿದ್ದಲ್ಲಿ ಇಲಾಖೆಯೇ ಕ್ಲುಪ್ತ ಅವಧಿಯಲ್ಲಿ ಕೇಂದ್ರಗಳ ಸ್ಥಾಪನೆಗೆ ಕ್ರಮ ಕೈಗೊಳ್ಳಲು ತಿಳಿಸಿದೆ.
16. ಕೇಂದ್ರಗಳು ಪ್ರಾರಂಭವಾದ 15 ದಿನದೊಳಗಾಗಿ ಡಿವೈಪಿಸಿ/ಎ.ಪಿ.ಸಿ ರವರು ಖುದ್ದಾಗಿ ಭೇಟಿ ನೀಡಿ ಪರಿಶೀಲಿಸುವುದು. ಬಿ.ಇ.ಓ/ಬಿ.ಆರ್.ಸಿ ಮೂಲಕವು 15 ದಿನದೊಳಗೆ ಕೇಂದ್ರಗಳಿಗೆ ಭೇಟಿ ಮಾಡಿಸಿ ಬಿ.ಇ.ಓ ರವರಿಂದ ಕೇಂದ್ರ ನಡೆಯುತ್ತಿರುವ ಬಗ್ಗೆ ಸುತ್ತೋಲೆ ರೀತ್ಯಾ ಸೌಲಭ್ಯ ಒದಗಿಸಿರುವ ಬಗ್ಗೆ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳ ದೃಢೀಕೃತ ಪಟ್ಟಿಯಲ್ಲಿನ ಮಕ್ಕಳಿಗೇ ವಿಶೇಷ ತರಬೇತಿ ನಡೆಸಲಾಗುತ್ತಿದೆ ಎಂಬ ಬಗ್ಗೆ ಖಾತ್ರಿಪಡಿಸಿಕೊಂಡು ಕೇಂದ್ರವಾರು ಅನುದಾನವನ್ನು ಬಿ.ಇ.ಓ/ಬಿ.ಆರ್.ಸಿ ಜಂಟಿ ಖಾತೆಗೆ ಬಿಡುಗಡೆ ಮಾಡುವುದು. **ವಿಳಂಬ ನೀತಿ ಅನುಸರಿಸಿದಲ್ಲಿ ಕರ್ತವ್ಯ ಲೋಪ ಎಂದು ಪರಿಗಣಿಸಿ ಕ್ರಮಕೈಗೊಳ್ಳಲಾಗುವುದು. ಇದು ಎಲ್ಲಾ ಚಟುವಟಿಕೆಗಳಿಗೆ ಅನ್ವಯಿಸುತ್ತದೆ.**
17. ಬಿ.ಇ.ಓ/ಬಿ.ಆರ್.ಸಿ ರವರು ಕೇಂದ್ರ ಪ್ರಾರಂಭವಾದ 15 ದಿನದೊಳಗೆ ಕೇಂದ್ರಗಳಿಗೆ ಭೇಟಿ ನೀಡಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಪಟ್ಟಿ ಪ್ರಕಾರವೇ ವಿಶೇಷ ತರಬೇತಿ ನೀಡಿರುವ ಬಗ್ಗೆ, ಸೌಲಭ್ಯ ಒದಗಿಸುತ್ತಿರುವ ಬಗ್ಗೆ ದೃಢಪಡಿಸಿಕೊಂಡು ಡಿಡಿಪಿಐ/ಡಿವೈಪಿಸಿ ರವರಿಗೆ ವರದಿ ಸಲ್ಲಿಸುವುದು. ಡಿಡಿಪಿಐ/ಡಿವೈಪಿಸಿ ರವರಿಂದ ಅನುದಾನ

ಬಿಡುಗಡೆಯಾದ ನಂತರ ಕೇಂದ್ರಗಳಿಗೆ ಹಣ ಬಿಡುಗಡೆಗೊಳಿಸಲು ಕ್ರಮವಹಿಸುವುದು. **ವಿಳಂಬ ನೀತಿ ಅನುಸರಿಸಿದಲ್ಲಿ ಕರ್ತವ್ಯ ಲೋಪ ಎಂದು ಪರಿಗಣಿಸಿ ಕ್ರಮಕೈಗೊಳ್ಳಲಾಗುವುದು. ಇದು ಎಲ್ಲಾ ಚಟುವಟಿಕೆಗಳಿಗೆ ಅನ್ವಯಿಸುತ್ತದೆ.**

2017–18ನೇ ಸಾಲಿನಲ್ಲಿ ಸಂಪೂರ್ಣ ದಾಖಲಾತಿ ಸಾಧಿಸಲು ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆಯನ್ನು ಶೂನ್ಯ ಸ್ಥಿತಿಗೆ ತರಬೇಕಾದ ಹಿನ್ನೆಲೆಯಲ್ಲಿ ನಿಮ್ಮ ವ್ಯಾಪ್ತಿಯಲ್ಲಿ ಎಲ್ಲಾ ಮಕ್ಕಳು ದಾಖಲಾಗಿ ನಿರಂತರವಾಗಿ ಹಾಜರಾಗಿ ಗುಣಮಟ್ಟದ ಶಿಕ್ಷಣವನ್ನು ಪಡೆಯುವಲ್ಲಿ ಕ್ರಮವಹಿಸಲು ತಿಳಿಸಿದೆ. ಅಲ್ಪಸಂಖ್ಯಾತ ಹಾಗೂ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ಮಕ್ಕಳ ದಾಖಲಾತಿ ಬಗ್ಗೆ ವಿಶೇಷ ಗಮನ ಹರಿಸಲು ತಿಳಿಸಿದೆ.

- ಮುಖ್ಯವಾಹಿನಿಗೆ ಸೇರಿದ ಶಾಲೆಯಿಂದ ಹೊರಗುಳಿದ ಮಕ್ಕಳ ಶೈಕ್ಷಣಿಕ ಸ್ಥಿತಿಯನ್ನು ತಿಳಿದುಕೊಳ್ಳಲು ಈಗಾಗಲೇ ಸುತ್ತೋಲೆಯಲ್ಲಿ ತಿಳಿಸಿರುವಂತೆ ದಾಖಲೆಗಳನ್ನು ನಿರ್ವಹಿಸುವುದು. **ಶಾಲೆಬಿಟ್ಟ / ಶಾಲೆಗೆ ದಾಖಲಾಗದ ಮಕ್ಕಳಿಗೆ ಪೂರ್ವಪರೀಕ್ಷೆ ನಡೆಸಿ ಅವರ ಕಲಿಕಾ ಹಂತಗಳನ್ನು ನಿರ್ಧರಿಸಿಕೊಂಡು ಪ್ರತಿ ಮಗುವಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಉಲ್ಲೇಖ 2ರ ಸುತ್ತೋಲೆಯಲ್ಲಿ ನೀಡಿರುವ ಅನುಬಂಧ 2 ರಲ್ಲಿರುವ ನಮೂನೆಯಲ್ಲಿ Individual Education Plan (IEP) ಮಾಡಿಕೊಂಡು ಮಗುವಿನ ವಯಸ್ಸಿಗೆ ಹಾಗೂ ತರಗತಿಗೆ ಅನುಗುಣವಾಗಿ ನಿಗದಿಪಡಿಸಿದ ಕಲಿಕಾ ಕಾರ್ಯಕ್ರಮಗಳನ್ನು ನಡೆಸುವುದು. ಪ್ರತಿಯೊಂದು ಕೇಂದ್ರದಲ್ಲಿಯೂ ಈ ರೀತಿಯ ದಾಖಲೀಕರಣವನ್ನು ಕಡ್ಡಾಯಗೊಳಿಸಿದೆ. ಹಾಗೂ**
- **ವಸತಿಸಹಿತ ಕೇಂದ್ರಗಳಲ್ಲಿ ಕನಿಷ್ಠ 2 ಬಾರಿ ವೈದ್ಯಕೀಯ ತಪಾಸಣೆ ಮಾಡಿಸುವುದು. ಹಾಗೂ ದಾಖಲೆಗಳನ್ನು ಉಲ್ಲೇಖ 2ರ ಸುತ್ತೋಲೆಯಲ್ಲಿ ನೀಡಿರುವ ಅನುಬಂಧ 3 ರಲ್ಲಿರುವ ನಮೂನೆಯಲ್ಲಿ ನಿರ್ವಹಿಸುವುದು.**
- **ವಿಶೇಷ ತರಬೇತಿ ಕೇಂದ್ರಗಳಿಗೆ 15 ದಿನಗಳಿಗೊಮ್ಮೆ ಭೇಟಿ ನೀಡಿ, ಪ್ರಗತಿ ಪರಿಶೀಲಿಸಿ, ವರದಿ ಮಾಡುವುದು.**
- ಕೇಂದ್ರ ನಡೆಯುವ ಶಾಲೆಯ ಮುಖ್ಯ ಶಿಕ್ಷಕರು ಕೇಂದ್ರದಲ್ಲಿ ದಾಖಲಾಗಿರುವ ಮಕ್ಕಳ ಪೂರ್ಣ ಮಾಹಿತಿಯನ್ನು ಪ್ರತಿ ದಿನ ನಿರ್ವಹಿಸಬೇಕು. ಸಂಬಂಧಿಸಿದ ಸಿ.ಆರ್.ಪಿಗಳು ಪ್ರತಿ ವಾರಕ್ಕೊಮ್ಮೆ ಕೇಂದ್ರಗಳಿಗೆ ಭೇಟಿ ನೀಡಿ ಪ್ರಗತಿ ವರದಿಯನ್ನು ಕ್ರೋಢಿಕರಿಸಬೇಕು. ಹಾಗೆಯೇ ಬಿ.ಆರ್.ಸಿ ಮತ್ತು ಬಿ.ಇ.ಓರವರು ಪ್ರತಿ 15 ದಿನಗಳಿಗೊಮ್ಮೆ ಕೇಂದ್ರಗಳಿಗೆ ಭೇಟಿ ಮಾಡಿ ಪ್ರಗತಿ ಪರಿಶೀಲಿಸಿ ನಿಖರವಾದ ಪ್ರಗತಿ ವರದಿಯನ್ನು ಕ್ರೋಢಿಕರಿಸಿ ಪ್ರತಿ ತಿಂಗಳು 28ನೇ ತಾರೀಖಿನೊಳಗೆ ಜಿಲ್ಲಾ ಕಛೇರಿಗೆ ಕಳುಹಿಸಬೇಕು.
- ಎಲ್ಲಾ ಕಾರ್ಯಕ್ರಮಗಳ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ನಿಗಧಿತ ನಮೂನೆಯಲ್ಲಿ ಜಿಲ್ಲಾ ಹಂತದಲ್ಲಿ ಕ್ರೋಢಿಕರಿಸಿ ಪ್ರತಿ ತಿಂಗಳು 2ನೇ ತಾರೀಖಿನೊಳಗೆ ರಾಜ್ಯ ಕಛೇರಿಗೆ ಸಲ್ಲಿಸುವುದು.
- ಮೇಲ್ಕಂಡ ರೀತಿಯಲ್ಲಿ ಅನುಮೋದಿತವಾಗಿರುವ ಯಾವುದೇ ಚಟುವಟಿಕೆಯನ್ನು ಅನುಷ್ಠಾನಗೊಳಿಸದಿದ್ದಲ್ಲಿ, ಕಾರಣಸಹಿತ ಸೂಕ್ತ ವಿವರಣೆ ನೀಡಲು ತಿಳಿಸಿದೆ ಮತ್ತು ನಿಗಧಿಪಡಿಸಲಾದ ಗುರಿಯನ್ನು ಸಾಧಿಸದಿದ್ದಲ್ಲಿ ಅದಕ್ಕೂ ಸಹ ಸೂಕ್ತ ವಿವರಣೆಯನ್ನು ಸಲ್ಲಿಸಲು ತಿಳಿಸಿದೆ.
- ಹೆಚ್ಚಿನ ಮಾಹಿತಿಗಾಗಿ ರಾಜ್ಯ ಕಛೇರಿಯ ಓ.ಓ.ಎಸ್.ಸಿ ಶಾಖೆಯ ಕಾರ್ಯಕ್ರಮಾಧಿಕಾರಿಗಳನ್ನು ಸಂಪರ್ಕಿಸುವುದು.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

**ಪ್ರತಿಯನ್ನು,**

1. ರಾಜ್ಯದ ಎಲ್ಲಾ ಡಿಡಿಪಿಐ ಮತ್ತು ಡಿವೈಪಿಸಿ ಯವರಿಗೆ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಬಿ.ಇ.ಓ/ಬಿ.ಆರ್.ಸಿ ಯವರಿಗೆ ಕ್ರಮಕ್ಕಾಗಿ.

**ಮಾಹಿತಿಗೆ ಮತ್ತು ಕ್ರಮಕ್ಕಾಗಿ:**

1. ಅಪರ ಆಯುಕ್ತರು, ಧಾರವಾಡ – ಗುಲ್ಬರ್ಗಾ
2. ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಧಾರವಾಡ.
3. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಬೆಂಗಳೂರು – ಡಿಎಸ್‌ಇಆರ್‌ಟಿ ಬೆಂಗಳೂರು, ಅಲ್ಪಸಂಖ್ಯಾತ ಭಾಷೆಗಳು ಬೆಂಗಳೂರು.
4. ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಬೆಳಗಾವಿ, ಗುಲ್ಬರ್ಗಾ, ಮೈಸೂರು, ಅಪರ ಆಯುಕ್ತರ ಕಛೇರಿ, ಧಾರವಾಡ/ಗುಲ್ಬರ್ಗಾ, ಪ್ರಿನ್ಸಿಪಾಲರು, ಸಿಟಿಇ – ಮೈಸೂರು, ಮಂಗಳೂರು – ಚಿತ್ರದುರ್ಗ – ಗುಲ್ಬರ್ಗಾ, ಜಮಖಂಡಿ, ಬೆಳಗಾವಿ.
5. ರಾಜ್ಯದ ಎಲ್ಲಾ ಡಿಡಿಪಿಐ (ಅಭಿವೃದ್ಧಿ), ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಇವರಿಗೆ ಡಿಡಿಪಿಐ ಕಛೇರಿ ಮುಖಾಂತರ ಪ್ರತಿಯನ್ನು ಕಳುಹಿಸುವುದು.
6. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಯವರಿಗೆ ಇವರಿಗೆ ಡಿಡಿಪಿಐ ಕಛೇರಿ ಮುಖಾಂತರ

7. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಆಧಿಕಾರಿಗಳಿಗೆ, ಜಿಲ್ಲಾ ಪಂಚಾಯತ್. ಇವರಿಗೆ ಡಿಡಿಪಿಐ ಕಛೇರಿ ಮುಖಾಂತರ ಪ್ರತಿಯನ್ನು ಕಳುಹಿಸುವುದು.
8. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಿಗೆ.
9. ಶಿಕ್ಷಣ ವಾರ್ತೆಯ ಸಂಪಾದಕರಿಗೆ.
10. ಈ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ

**ಮಾಹಿತಿಗೆ ಇವರಿಗೆ ಸಲ್ಲಿಸಿದೆ.**

1. ಮಾನ್ಯ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು
   ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

**Annexure -1**

**Form 5 of child census book**

**Record of Children**
**Village / Ward Education Register (VER)**
**(to be maintained by Village Panchayat / Local authorities under section 9 (d) of RTE Act )**
**<u>5 to 14 + age group children who are in school / out of school children</u>**

District : ________________
Cluster: ________________
Habitation:_______________

Block: ________________
Panchayat/ward: ________________
Name of the centre school: ________________

| Sl. No. | Census form no. | Photo of the child | Name of the child | Name of the father / Guardian & address, occup ation | Name of the mother | Date of birth of the child | Age in completed years | caste (code no.)and whether the child belongs to disadvantaged /weaker section as per Sec.2 | Sex Boy-1 Girl-2 | If child with special needs | If going to school, give details starting from pre-primary to present class | | | If not going to school | | If never enrolled or never gone to school. (Yes-1 No-2) | Details of special training & mainstr eaming name of the school & class admission No. | If not , details of special training , residential facility required |
|---|---|---|---|---|---|---|---|---|---|---|---|---|---|---|---|---|---|---|
| | | | | | | | | | | | Name of the school | Class (1 to 8) | Admission No. | class in which left the school (1 to 8) | Reasons for leaving the school (code No.) | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 |
| | | | | | | | | | | | | | | | | | | |
| | | | | | | | | | | | | | | | | | | |

Note:-
1) The details of all the children in the habitation in the age group of 5 to 14 years who are going to school and not going to school shall be entered in the VER.
2) Every Grama Panchayat / Local authority shall maintain the record of children in the habitations coming under its jurisdiction.
3) It shall be updated once in 3 months ( 30th of June, September, December and March every year)
4) Record of children shall be computerised and to be entered in online child tracking software developed by SSA, to be displayed in the public domain, in all the schools under its jurisdiction.

Signature of Chairman, Local Authority
& P.D.O

***********